ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ

ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ

ಹಾಗೂ

ಸಸ್ಯ ತಳಿ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರ, ನವದೆಹಲಿ

# ಸಸ್ಯ ತಳಿಗಳ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯಿದೆ 2001

## ಮಾಹಿತಿ ಕೈಪಿಡಿ

ಡಿಸೆಂಬರ್ - 2014



# ಕೃಷಿ ವಿಜ್ಞಾನ ಕೇಂದ್ರದ ಪ್ರಮುಖ ಕಾರ್ಯಚಟುವಟಿಕೆಗಳು

- ☞ ವಿವಿಧ ಕೃಷಿ ಪದ್ಧತಿಗಳಲ್ಲಿ ಸ್ಥಾನಿಕ ಕೃಷಿ ತಂತ್ರಜ್ಞಾನಗಳನ್ನು ಗುರುತಿಸಲು ಕ್ಷೇತ್ರ ಪರೀಕ್ಷೆಗಳನ್ನು ಕೈಗೊಳ್ಳುವುದು.
- ☞ ರೈತರ ಕ್ಷೇತ್ರಗಳಲ್ಲಿ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ವಿವಿಧ ತಂತ್ರಜ್ಞಾನಗಳ ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳುವುದು.
- ☞ ರೈತ/ ರೈತಮಹಿಳೆಯರಿಗೆ ಅಗತ್ಯಕ್ಕನುಗುಣವಾಗಿ ಆಧುನಿಕ ತಂತ್ರಜ್ಞಾನಗಳ ಬಗ್ಗೆ ಜ್ಞಾನ ಮತ್ತು ಕೌಶಲ್ಯ ಹೆಚ್ಚಿಸಲು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಹಾಗೂ ವಿಸ್ತರಣಾ ಕಾರ್ಯಕರ್ತರಿಗೆ ಪ್ರಮುಖ ತಂತ್ರಜ್ಞಾನಗಳನ್ನು ಪರಿಚಯಿಸಲು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ☞ ಜನ ಸಮೂಹಗಳಿಗೆ ಸುಧಾರಿತ ತಂತ್ರಜ್ಞಾನಗಳ ಬಗ್ಗೆ ಜಾಗೃತಿ ಮೂಡಿಸಲು ಸೂಕ್ತ ವಿಸ್ತರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ☞ ಉತ್ತಮ ಗುಣಮಟ್ಟದ ಬೀಜ, ಸಸಿ, ಜಾನುವಾರುಗಳು, ಕೋಳಿ ಮತ್ತು ಮೀನು ಮರಿಗಳ ತಳಿ ಹಾಗೂ ಜೈವಿಕ ಉತ್ಪನ್ನಗಳನ್ನು ಅಭಿವೃದ್ಧಿ ಪಡಿಸಿ ರೈತರಿಗೆ ಸೂಕ್ತ ಬೆಲೆಯಲ್ಲಿ ಒದಗಿಸುವುದು.
- ☞ ಜಿಲ್ಲೆಯ ಕೃಷಿ ಆರ್ಥಿಕತೆಯನ್ನು ಹೆಚ್ಚಿಸಲು ವಿವಿಧ ಸಂಘ ಸಂಸ್ಥೆಗಳಿಗೆ ಹಾಗೂ ಇತರೇ ಸಂಸ್ಥೆಗಳಿಗೆ ವಿವಿಧ ತಂತ್ರಜ್ಞಾನಗಳನ್ನು ಒದಗಿಸುವ ಸಂಪನ್ಮೂಲ ಮತ್ತು ಜ್ಞಾನ ಕೇಂದ್ರವಾಗಿ ಕಾರ್ಯನಿರ್ವಹಿಸುವುದು.

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ
ಹಾಗೂ
ಸಸ್ಯ ತಳಿ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರ, ನವದೆಹಲಿ

# ಸಸ್ಯ ತಳಿಗಳ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯಿದೆ 2001

## ಮಾಹಿತಿ ಕೈಪಿಡಿ

ಸಂಪಾದಕರು
ಶ್ರೀ. ಡಿ. ಎಸ್. ಮಲ್ಲಿಕಾರ್ಜುನಪ್ಪಗೌಡ
ಡಾ. ಎಸ್. ಎ. ಅಷ್ಟಪುತ್ರೆ

ಪ್ರಕಾಶಕರು
ಡಾ. ಸರೋಜನಿ ಜೆ. ಕರಕಣ್ಣವರ
ಕಾರ್ಯಕ್ರಮ ಸಂಯೋಜಕರು, ಕೃ.ವಿ.ಕೆ

ತಾಂತ್ರಿಕ ಮಾಹಿತಿ
ಡಾ. ನಿರಂಜನ ಮೂರ್ತಿ
ಡಾ. ಕಾವೇರಿ ಬಿರಾದರ

ಬೆರಳಚ್ಚು : ಸರೋಜ ಬಿ. ತಳವಾರ
ವಿನ್ಯಾಸ : ರೇಖಾ ಕೆ. ಎಸ್.

ಡಿಸೆಂಬರ್ - 2014 ಪ್ರತಿಗಳು : 1000

# ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯಿದೆ 2001

## ಕಾಯಿದೆಯ ಮೂಲ ಕಾರಣ

ಕೃಷಿಯಲ್ಲಿ ಆಗಿರುವ ಇದುವರೆಗಿನ ಪ್ರಗತಿಗೆ ವಿವಿಧ ಬೆಳೆಗಳಲ್ಲಿ ಅಭಿವೃದ್ಧಿಪಡಿಸಿರುವ ಹೊಸ ಮತ್ತು ಸುಧಾರಿತ ತಳಿಗಳು ಬಹಳ ಮಹತ್ವದ ಪಾತ್ರ ವಹಿಸಿವೆ. ಹೊಸ ತಳಿಗಳನ್ನು ಅಭಿವೃದ್ಧಿಪಡಿಸುವಲ್ಲಿ ರೈತರ ಕೊಡುಗೆ ಜಗತ್ತಿನಾದ್ಯಂತ ಬಹಳ ಪ್ರಮುಖವಾಗಿದೆ. ವೈಜ್ಞಾನಿಕ ರೀತಿಯಲ್ಲಿ ಹೊಸ ತಳಿಗಳನ್ನು ಅಭಿವೃದ್ಧಿಪಡಿಸುವ ವಿಧಾನ ಶುರುವಾದುದೆ ಕೇವಲ ನೂರು ವರ್ಷಗಳ ಹಿಂದೆ ಅಂದರೆ, ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಅನುವಂಶೀಯ ವಿಜ್ಞಾನ ಜನನವಾಗಿ, ತಳಿ ಅಭಿವೃದ್ಧಿ ವಿಜ್ಞಾನ ಬೆಳೆದು ಅದರ ಮೂಲಕ ಹೊಸ ಹೊಸ ಸುಧಾರಿತ ತಳಿಗಳನ್ನು ಮತ್ತು ಶಕ್ತಿಮಾನ್ ತಳಿಗಳನ್ನು ಅಭಿವೃದ್ಧಿಪಡಿಸಿ, ಕೃಷಿ ಉತ್ಪಾದನೆಯಲ್ಲಿ ಒಂದು ಕ್ರಾಂತಿಯಾಗಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ನಮ್ಮ ದೇಶದಲ್ಲಿ 60ರ ದಶಕದಲ್ಲಿ ಭತ್ತ ಮತ್ತು ಗೋಧಿ ಬೆಳೆಗಳಲ್ಲಿ ಅರೆ ಕುಬ್ಜ ತಳಿಗಳನ್ನು ಪರಿಚಯಿಸಿ, ಆ ತಳಿಗಳನ್ನು ಉಪಯೋಗಿಸಿ, ಹೊಸ ಸುಧಾರಿತ ತಳಿಗಳನ್ನು ಅಭಿವೃದ್ಧಿಪಡಿಸಿ, ಕೃಷಿಯಲ್ಲಿ ಸಾಧಿಸಿದ ಹಸಿರು ಕ್ರಾಂತಿ ಒಂದು ಸುವರ್ಣ ಇತಿಹಾಸ. ಹೊಸ ತಳಿಗಳು ಜಾಸ್ತಿ ಇಳುವರಿ ಕೊಡುವುದರಿಂದ, ಈ ಹೊಸ ತಳಿಗಳ ಬಿತ್ತನೆ ಬೀಜಕ್ಕೆ ಬಹಳ ಪ್ರಾಮುಖ್ಯ ಮತ್ತು ಬೇಡಿಕೆ ಉಂಟಾಯಿತು. ಬೀಜದ ಬೇಡಿಕೆಯನ್ನು ರೈತರು ತಾವೇ ಬೆಳೆದ ಬೆಳೆಯಿಂದ ಬೀಜವನ್ನು ಉಳಿಸುವ ಮತ್ತು ಇತರ ರೈತರೊಡನೆ ಬಿತ್ತನೆ ಬೀಜವನ್ನು ಹಂಚಿಕೊಳ್ಳುವ ಮತ್ತು ವಿನಿಮಯ ಮಾಡಿಕೊಳ್ಳುವ ಮೂಲಕ ಬೀಜಕ್ಕೆ ಉದ್ಭವಿಸಿದ ಬಹಳಷ್ಟು ಬೇಡಿಕೆಯನ್ನು ಈಡೇರಿಸಲಾಯಿತು. ಉಳಿದಂತೆ, ಸರ್ಕಾರಿ ಮತ್ತು ಖಾಸಗಿ ಬೀಜ ಪೂರೈಸುವ ಸಂಸ್ಥೆಗಳು ಸ್ವಲ್ಪರ ಮಟ್ಟಿಗೆ ಬೀಜ ಬೇಡಿಕೆಯನ್ನು ನೀಗಿಸಿದವು. ಇಷ್ಟಾದರೂ, ಇಂತಹ ಹಸಿರು ಕ್ರಾಂತಿಯ ದಿನಗಳಲ್ಲಿ ಸಸ್ಯ ತಳಿಗಳ ಮೇಲೆ ಮಾಲೀಕತ್ವ ಪಡೆಯುವುದರ ಬಗ್ಗೆ ಯಾರಿಗೂ ಯೋಚನೆ ಬರಲಿಲ್ಲ, ಹಲವು ವಿಜ್ಞಾನಿಗಳು ತಳಿ ಅಭಿವೃದ್ಧಿಪಡಿಸಿದ್ದರೂ, ಅವರಿಗೂ ಸಹ ಸಸ್ಯ ತಳಿಗಳ ಮಾಲೀಕತ್ವ ಬಗ್ಗೆ ಯೋಚನೆ ಬಂದಿರಲಿಲ್ಲ. ಒಟ್ಟಾರೆ ಹೇಳಬೇಕೆಂದರೆ, ಕೃಷಿ ಉತ್ಪಾದನೆಯಲ್ಲಿ

ಹೊಸ ತಳಿಗಳ ಪಾತ್ರ ಇಷ್ಟಾಗಿದ್ದರೂ, ಹಾಗೂ ಹೊಸ ತಳಿಗಳ ಬೀಜಕ್ಕೆ ಬಹಳ ಬೇಡಿಕೆ ಇದ್ದರೂ, ಈ ಹೊಸ ತಳಿಗಳ ಮಾಲೀಕತ್ವದ ಮೇಲೆ ಹಾಗೂ ಅವುಗಳ ರಕ್ಷಣೆ ಕುರಿತಂತೆ, ಯಾರೂ ಗಮನಹರಿಸಿರಲಿಲ್ಲ. ಆದರೆ ಇಂದು, ಸಸ್ಯ ತಳಿ ರಕ್ಷಣೆಗೆ ಪ್ರತಿ ರಾಷ್ಟ್ರವು, ಅದರಲ್ಲೂ ವಿಶ್ವ ವಾಣಿಜ್ಯ ಸಂಸ್ಥೆ ಸದಸ್ಯ ರಾಷ್ಟ್ರಗಳು, ಸಸ್ಯ ತಳಿ ರಕ್ಷಣೆ ವಿಷಯನ್ನು ಮಾನ್ಯ ಮಾಡಲೇ ಬೇಕಿದೆ. ಇದಕ್ಕಾಗಿ ತಮ್ಮದೇ ಆದ ರೀತಿಯಲ್ಲಿ ಶಾಸನಗಳನ್ನು ಜಾರಿಗೊಳಿಸಿ ಸಸ್ಯ ತಳಿಗಳ ಕಾನೂನಿನ ಚೌಕಟ್ಟಿನಲ್ಲಿ ರಕ್ಷಣೆ ನೀಡುವ ಪ್ರಯತ್ನ ನಡೆಸುತ್ತಿವೆ.

## ಸಸ್ಯ ತಳಿ ರಕ್ಷಣೆಯ ಉದ್ದೇಶ

ಸಸ್ಯ ತಳಿಗಳ ರಕ್ಷಣೆಯನ್ನು ಕಾನೂನಿನ ಚೌಕಟ್ಟಿನಲ್ಲಿ ಅಳವಡಿಸಿ, ಇತ್ತೀಚೆಗೆ ನಮ್ಮ ಭಾರತ ಸರ್ಕಾರವು ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯಿದೆ 2001 (PPVFR ACT) ಎಂಬ ಶಾಸನವನ್ನು ರೂಪಿಸಿದೆ.

## ಈ ಶಾಸನದ ಮುಖ್ಯ ಉದ್ದೇಶವೆಂದರೆ

1. ವಿಶ್ವ ವಾಣಿಜ್ಯ ಸಂಸ್ಥೆ (WTO) ಯೊಡನೆ ನಮ್ಮ ದೇಶ ಒಪ್ಪಂದ ಮಾಡಿಕೊಂಡಿರುವಂತೆ, ವ್ಯಾಪಾರ ಸಂಬಂಧಿತ ಬೌದ್ಧಿಕ ಆಸ್ತಿ ಹಕ್ಕುಗಳನ್ನು (IPR) ರಕ್ಷಿಸುವಲ್ಲಿ, ಸಸ್ಯ ತಳಿಗಳ ರಕ್ಷಣೆಯು ಸಹ ಒಂದಾಗಿದೆ. ವಿಶ್ವ ವಾಣಿಜ್ಯ ಸಂಸ್ಥೆಯ ಸದಸ್ಯ ರಾಷ್ಟ್ರಗಳು ಆಯಾ ದೇಶಗಳಲ್ಲಿ ಅಭಿವೃದ್ಧಿಪಡಿಸಿರುವ ಹೊಸ ಸಸ್ಯ ತಳಿಗಳನ್ನು ಕಾನೂನಿನ ಚೌಕಟ್ಟಿನಲ್ಲಿ ರಕ್ಷಣೆ ಮಾಡಲೇ ಬೇಕಾಗಿದೆ.

2. ಸಸ್ಯ ತಳಿಗಳನ್ನು ಅಭಿವೃದ್ಧಿಪಡಿಸುವಲ್ಲಿ, ಸಸ್ಯ ಸಂಪನ್ಮೂಲಗಳನ್ನು ಸಂರಕ್ಷಣೆ ಮತ್ತು ಅಭಿವೃದ್ಧಿಪಡಿಸುವಲ್ಲಿ ಹಾಗೂ ಹೊಸ ತಳಿಗಳನ್ನು ಅಭಿವೃದ್ಧಿಪಡಿಸುವಲ್ಲಿ ರೈತರು ತಲತಲಾಂತರಗಳಿಂದ ಹಲವಾರು ರೀತಿಯಲ್ಲಿ ನೀಡಿರುವ, ನೀಡುತ್ತಿರುವ ಕೊಡುಗೆಯನ್ನು ಗುರುತಿಸಿ ಅವರ ಹಕ್ಕುಗಳನ್ನು ಮಾನ್ಯ ಮಾಡುವುದು ಕಾಯ್ದೆಯ ಉದ್ದೇಶ.

3. ಕೃಷಿ ಅಭಿವೃದ್ಧಿಯ ದೃಷ್ಟಿಯಿಂದ ಹೊಸ ತಳಿ ಅಭಿವೃದ್ಧಿ ಕ್ರಿಯೆಯನ್ನು ಪ್ರೋತ್ಸಾಹಿಸುವುದು ಮತ್ತು ಈ ಕ್ರಿಯೆಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳು ಹೆಚ್ಚು ಬಂಡವಾಳ ಹೂಡಲು ಉತ್ತೇಜನ ನೀಡುವುದು.

4. ರೈತರಿಗೆ ಉತ್ತಮ ಗುಣಮಟ್ಟದ ಬಿತ್ತನೆ ಬೀಜವನ್ನು ದೊರಕಿಸಲು ಅನುವಾಗುವಂತೆ ಬೀಜ ಉದ್ಯಮವನ್ನು ಪ್ರೋತ್ಸಾಹಿಸುವುದು.

## ಕಾಯಿದೆಯ ಮುಖ್ಯ ವೈಶಿಷ್ಟಗಳು

1. ಸಂಶೋಧಕನ ಅಥವಾ ತಳಿ ಸಂವರ್ಧಕನ ಹಕ್ಕುಗಳನ್ನು ಮಾನ್ಯ ಮಾಡುವುದು.
2. ಹೊಸ ತಳಿಯಿಂದ ಬರುವ ಲಾಭವನ್ನು ತಳಿ ಸಂವರ್ಧಕರು ಮತ್ತು ತಳಿ ವೈವಿದ್ಯತೆಗೆ ಕಾರಣರಾದ ರೈತ ಅಥವಾ ಬುಡಕಟ್ಟು ಸಮುದಾಯ ಹಂಚಿಕೊಳ್ಳುವುದರ ಬಗ್ಗೆ.
3. ತಳಿ ಸಂರಕ್ಷಣೆಯನ್ನು ಉತ್ತೇಜಿಸಲು "ರಾಷ್ಟ್ರೀಯ ವಂಶಾಣು ನಿಧಿ" (National Gene Fund) ಯನ್ನು ನಿರ್ಮಿಸುವುದು.

## ಸಸ್ಯ ತಳಿ ಮತ್ತು ರೈತರ ಹಕ್ಕುಗಳ ರಕ್ಷಣೆ ಪ್ರಾಧಿಕಾರದ ರಚನೆ

ಸಸ್ಯ ತಳಿ ಮತ್ತು ರೈತರ ಹಕ್ಕುಗಳ ರಕ್ಷಣೆ ಕಾಯಿದೆಯನ್ನು ದೇಶದಾದ್ಯಂತ ಅನುಷ್ಠಾನಗೊಳಿಸುವುದಕ್ಕೆ ಸಸ್ಯ ತಳಿ ಮತ್ತು ರೈತರ ಹಕ್ಕುಗಳ ರಕ್ಷಣೆ ಪ್ರಾಧಿಕಾರವನ್ನು 2005ರಲ್ಲಿ ರಚಿಸಲಾಗಿದೆ. ಈ ಪ್ರಾಧಿಕಾರವು ನವದೆಹಲಿಯಲ್ಲಿದ್ದು, ಭಾರತ ಸರ್ಕಾರವು ಪ್ರಾಧಿಕಾರದ ಅಧ್ಯಕ್ಷರನ್ನು ನೇಮಕ ಮಾಡುವುದು. ಪ್ರಸ್ತುತದಲ್ಲಿ ಕರ್ನಾಟಕ ರಾಜ್ಯದ ಖ್ಯಾತ ಕೃಷಿ ವಿಜ್ಞಾನಿಯಾದ ಡಾ. ಆರ್.ಆರ್. ಹಂಚಿನಾಳರವರು ಪ್ರಾಧಿಕಾರದ ಅಧ್ಯಕ್ಷರಾಗಿರುತ್ತಾರೆ. ಅಧ್ಯಕ್ಷರನ್ನು ಹೊರತುಪಡಿಸಿ, ಭಾರತ ಸರ್ಕಾರವು ಅಧಿಸೂಚನೆಯ ಮೇರೆಗೆ ಪ್ರಾಧಿಕಾರದಲ್ಲಿ 15 ಸದಸ್ಯರಿರುತ್ತಾರೆ. ಕೇಂದ್ರ ಸರ್ಕಾರದ ನಾಮನಿರ್ದೇಶನಗೊಂಡ ಎಂಟು ಪದ ನಿಮಿತ್ತ ಸದಸ್ಯರು ವಿವಿಧ ಇಲಾಖೆಗಳಿಂದ ನಾಮನಿರ್ದೇಶನಗೊಂಡಿರುತ್ತಾರೆ. ಒಬ್ಬ ಸದಸ್ಯರು ರಾಷ್ಟ್ರ/ರಾಜ್ಯ ಮಟ್ಟದ ಮಹಿಳಾ ಸಂಘ ಪ್ರತಿನಿಧಿಯಾಗಿದ್ದು, ಕೃಷಿ ಚಟುವಟಿಕೆಗಳಲ್ಲಿ ತೊಡಗಿರಬೇಕು. ಇಬ್ಬರು ಸದಸ್ಯರನ್ನು ರಾಜ್ಯ ಸರ್ಕಾರಗಳ ಪ್ರತಿನಿಧಿಯಾಗಿ ಪರಿವರ್ತಿತ ಆಧಾರದ ಮೇಲೆ ಕೇಂದ್ರ ಸರ್ಕಾರವು ನೇಮಿಸುತ್ತದೆ. ರಿಜಿಸ್ಟ್ರಾರ್ ಜನರಲ್ ರವರು ಪ್ರಾಧಿಕಾರದ ಪದ ನಿಮಿತ್ತ ಕಾರ್ಯದರ್ಶಿಯಾಗಿರುತ್ತಾರೆ. ಪ್ರಾಧಿಕಾರದ ಅಧ್ಯಕ್ಷರ ಅವಧಿಯು ಸರ್ಕಾರ ಹೊರಡಿಸುವ ಆದೇಶದಂತೆ ಇರುತ್ತದೆ. ಐದು ಸದಸ್ಯರನ್ನೊಳಗೊಂಡ ಸ್ಥಾಯಿ ಸಮಿತಿಯನ್ನು ಪ್ರಾಧಿಕಾರದ ಅಧ್ಯಕ್ಷರು ನೇಮಕ ಮಾಡಬಹುದಾಗಿದ್ದು, ಪ್ರಾಧಿಕಾರಕ್ಕೆ ರೈತರ ಹಕ್ಕುಗಳು ಹಾಗೂ ಇತರ ವಿಷಯಗಳಲ್ಲಿ ಸಲಹೆ ನೀಡುವರು.

## ಪ್ರಾಧಿಕಾರದ ಕಾರ್ಯ ಚಟುವಟಿಕೆಗಳು

1) ಹೊಸ ತಳಿಗಳ, ಅವಶ್ಯಕವಾಗಿ ಉತ್ಪತ್ತಿಯಾದ ತಳಿ (Essentially Derived Variety) ಹಾಗೂ ಚಾಲ್ತಿಯಲ್ಲಿರುವ ತಳಿಗಳನ್ನು ನೋಂದಾಯಿಸುವುದು.

2) ಹೊಸ ತಳಿಗಳಿಗೆ ಡಸ್(ವಿಭಿನ್ನತೆ, ಏಕರೂಪತೆ ಹಾಗೂ ದೃಢತೆಯ) ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸುವುದು.

3) ನೋಂದಾಯಿತ ತಳಿಗಳ ಗುಣಧರ್ಮಗಳನ್ನು ದಾಖಲಿಸುವುದು.

4) ಸಸ್ಯ ತಳಿ ಸಂಪತ್ತನ್ನು ಸಂರಕ್ಷಿಸಲು ಶ್ರಮಿಸುತ್ತಿರುವ ರೈತರು, ವಿಶೇಷವಾಗಿ ಪರಿಶಿಷ್ಟ ಪಂಗಡಕ್ಕೆ ಸೇರಿದ ರೈತ ಸಮುದಾಯಗಳ ಕೊಡುಗೆಯನ್ನು ಗುರುತಿಸಿ, ಸನ್ಮಾನಿಸುವುದು.

5) ರಾಷ್ಟ್ರೀಯ ಜೀನ್ ಬ್ಯಾಂಕನ್ನು ನಿರ್ವಹಿಸುವುದು.

6) ಸಸ್ಯ ತಳಿಗಳ ರಾಷ್ಟ್ರೀಯ ದಾಖಲೆಗಳನ್ನು ನಿರ್ವಹಣೆ ಮಾಡುವುದು.

## ಕಾಯ್ದೆಯ ಅಡಿಯಲ್ಲಿರುವ ಹಕ್ಕುಗಳು

### 1) ತಳಿವರ್ಧಕರ ಹಕ್ಕುಗಳು

ಪ್ರಾಧಿಕಾರದಲ್ಲಿ ಒಂದು ಬೆಳೆಯ ತಳಿಯೊಂದನ್ನು ನೊಂದಣಿ ಮಾಡಿ, ದೃಢೀಕರಣ ಪತ್ರ ದೊರೆತ ನಂತರ ಸಂಬಂಧಪಟ್ಟ ತಳಿವರ್ಧಕನಿಗೆ ಕಾನೂನಿನ ಚೌಕಟ್ಟಿನಲ್ಲಿ ಆ ಮೇಲಿನ ಬೀಜೋತ್ಪಾದನೆ, ಮಾರಾಟ, ಮಾರುಕಟ್ಟೆ, ವಿತರಣೆ, ರಫ್ತು ಮತ್ತು ಆಮದು ವಿಷಯಗಳ ಮೇಲೆ ಸ್ವಾಮ್ಯ ದೊರೆಯುತ್ತದೆ. ಇಂತಹ ಹಕ್ಕುಗಳನ್ನು ತಳಿವರ್ಧಕನ ಹಕ್ಕುಗಳು ಎಂದು ಕರೆಯಲಾಗುತ್ತದೆ. ಈ ಹಕ್ಕುಗಳನ್ನು ತಳಿವರ್ಧಕನು ಇತರಿಗೆ ಮಾರಾಟ ಮಾಡಬಹುದು ಅಥವಾ ಗುತ್ತಿಗೆ ನೀಡಬಹುದು.

### 2) ಸಂಶೋಧಕರ ಹಕ್ಕುಗಳು

ಸಂಶೊಧಕರು ನೋಂದಾಯಿತ ತಳಿಗಳನ್ನು ಸಂಶೋಧನೆಯ ಉದ್ದೇಶಕ್ಕಾಗಿ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದೆ. ತಳಿ ಅಭಿವೃದ್ಧಿಯ ಉದ್ದೇಶಕ್ಕಾಗಿ ಆದರೆ,

ಮೇಲಿಂದ ಮೇಲೆ ಈ ನೋಂದಾಯಿತ ತಳಿಗಳನ್ನು ಉಪಯೋಗಿಸುವುದಾದರೆ, ನೋಂದಾಯಿತ ತಳಿವರ್ಧಕರ ಪೂರ್ವಾನುಮತಿಯನ್ನು ಪಡೆಯಬೇಕಾಗುತ್ತದೆ.

## 3) ರೈತರ ಹಕ್ಕುಗಳು

ನಮ್ಮ ದೇಶದ ಸಸ್ಯ ತಳಿ ರಕ್ಷಣೆ ಕಾಯಿದೆಯಲ್ಲಿ ಸಸ್ಯ ತಳಿಗಳ ರಕ್ಷಣೆ ಜೊತೆಗೆ ರೈತರ ಹಕ್ಕುಗಳಿಗೆ ರಕ್ಷಣೆ ನೀಡುವುದೇ ಕಾನೂನಿನ ಒಂದು ವೈಶಿಷ್ಟ.

## 1. ಬಿತ್ತನೆ ಬೀಜದ ಮೇಲಿರುವ ರೈತರ ಹಕ್ಕುಗಳು

ರೈತರಿಗೆ, ಬೀಜದ ಮೇಲೆ ಇರುವ ಸಾಂಪ್ರದಾಯಿಕ ಹಕ್ಕು, ಕೃಷಿ ಪ್ರಾರಂಭವಾದ ಕಾಲದಿಂದ ಪರಂಪರಗತವಾಗಿ ಬಂದುದ್ದಾಗಿದೆ. ಈ ಹಕ್ಕುಗಳ ಅನ್ವಯ ರೈತನಿಗೆ ಬೀಜವನ್ನು ಉಳಿಸಿಕೊಳ್ಳುವ ಮುಂದಿನ ಬಿತ್ತನೆಗೆ ಉಪಯೋಗಿಸುವ, ಇತರ ರೈತರೊಡನೆ ಹಂಚಿಕೊಳ್ಳುವ, ವಿನಿಮಯ ಮಾಡಿಕೊಳ್ಳುವ ಮತ್ತು ಇತರ ರೈತರಿಗೆ ಮಾರಾಟ ಮಾಡುವ ಅವಕಾಶಗಳನ್ನು ಕಲ್ಪಿಸಲಾಗಿದೆ. ತಳಿ ಸಂರಕ್ಷಣೆಯಲ್ಲಿ ರೈತ ನಿರ್ವಹಿಸುತ್ತಿರುವ ಕಾರ್ಯಕ್ಕೆ ಈ ರೀತಿಯ ಹಕ್ಕು ನೀಡಿಕೆ ಮೂಲಭೂತವಾದದ್ದು ಎಂದು ಹೇಳಿದರೆ ತಪ್ಪಾಗಲಾರದು. ಕಾಲಚಕ್ರದಲ್ಲಿ ರೈತರು ಸಸ್ಯ ತಳಿಗಳ ಪೂರ್ಣ ವೈವಿಧ್ಯತೆಗೆ ಕಾರಣವಾಗಿರುವುದರಿಂದ ಅವರಿಗೆ ಎಲ್ಲಾ ರೀತಿಯ ಸಸ್ಯ ತಳಿಗಳ ಮೇಲೆ ಅಂದರೆ, ಸಾಂಪ್ರದಾಯಿಕ ಮತ್ತು ಹೊಸದಾಗಿ ಅಭಿವೃದ್ಧಿ ಮಾಡಿದ ತಳಿಗಳ ಅಥವಾ ಯಾವುದೇ ರಕ್ಷಿತ ತಳಿಯ ಬೀಜದ ಮೇಲೆ ಹಕ್ಕಿರುತ್ತದೆ. ಕಾಯಿದೆಯ ಅನ್ವಯ ನೋಂದಣಿಸಿದ ತಳಿಯ ಬೀಜಗಳನ್ನು ಇತರರಿಗೆ ಪ್ಯಾಕ್ ಮಾಡಿ ಅಥವಾ ಮುದ್ರಾಂಕ (ಬ್ರ್ಯಾಂಡ) ಮಾಡಿ ಮಾರುವಂತಿಲ್ಲ. ರೈತರಿಗೆ ಬೀಜದ ಮೇಲಿರುವ ಇಂತಹ ಹಕ್ಕುಗಳನ್ನು ಮತ್ತಷ್ಟು ಮಾನ್ಯ ಮಾಡಲು ಬೀಜ ಮೊಳಕೆಗೆ ಮಾರಕವಾಗುವಂತಹ 'ಟರ್ಮಿನೇಟರ್ ಜೀನ್' ತಾಂತ್ರಿಕತೆಯ ಗುಣಗಳನ್ನು ತಳಿಯಲ್ಲಿ ಸೇರಿದ್ದರೆ ಕಾಯ್ದೆಯನ್ವಯ, ಅಂತಹ ತಳಿಗಳ ನೋಂದಣಿಗೆ ಅವಕಾಶವಿಲ್ಲ.

## 2. ಸಾಂಪ್ರದಾಯಿಕ ತಳಿಗಳನ್ನು ನೋಂದಣಿ ಮಾಡಲು ರೈತರಿಗೆ ಇರುವ ಹಕ್ಕುಗಳು

ಕಾಯ್ದೆಯನ್ವಯ, ಸಾಂಪ್ರದಾಯಿಕ ಅಥವಾ ರೈತರ ತಳಿಗಳನ್ನು ನೋಂದಣಿ ಮಾಡುವ ಹಕ್ಕನ್ನು ರೈತರಿಗೆ ಕಲ್ಪಿಸಿಕೊಡಲಾಗಿದೆ. ಇದರಿಂದ, ತಳಿ ಸಂವರ್ಧಕ ಹಕ್ಕುಗಳ

ಮಾನ್ಯತೆ ಪಡೆದ ರೈತ ಬೀಜೋತ್ಪಾದನೆ ಮತ್ತು ಬೀಜ ಮಾರಾಟದ ಮೇಲೆ ಕಾನೂನು ರೀತ್ಯ ಸಂಪೂರ್ಣ ಹಕ್ಕು ಸಿಗುತ್ತದೆ. ತಳಿಗಳ ಅಭಿವೃದ್ಧಿಯಿಂದ ತಳಿ ವಿಜ್ಞಾನಿಗೆ ಸಿಗುವಷ್ಟು ಪುರಸ್ಕಾರ ರೈತರಿಗೂ ಸಹ ಸಿಗುತ್ತದೆ. ಸಮುದಾಯದಿಂದ ಸಂರಕ್ಷಿಸಲ್ಪಟ್ಟು, ಅಭಿವೃದ್ಧಿ ಮಾಡಿದ ಸಾಂಪ್ರದಾಯಿಕ ತಳಿಗಳು ಮತ್ತು ಹಲವು ರೈತರು ಸೇರಿ ಹೊಸ ತಳಿಯನ್ನು ಅಭಿವೃದ್ಧಿಪಡಿಸಿದ್ದರೆ, ಅಂತವರಿಗೆ ತಳಿ ನೋಂದಣಿ ಮಾಡಿಸುವ ಅರ್ಹತೆ ದೊರೆಯುತ್ತದೆ. ಸಾಂಪ್ರದಾಯಿಕ ತಳಿಗಳನ್ನು ನೋಂದಣಿ ಮಾಡಿಸುವಾಗ ತಳಿ ಮೂಲದ ಯಾವುದೇ ಪುರಾವೆ ಮತ್ತು ಸಾಕ್ಷಾಧಾರಗಳು ದೊರೆಯದಿದ್ದರೆ, ಅಂತಹ ತಳಿಗಳ ಸಂರಕ್ಷಣೆ ಮತ್ತು ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡ ಎಲ್ಲಾ ಸಮುದಾಯವನ್ನು ತಳಿ ನೋಂದಣಿಯಲ್ಲಿ ಪುರಸ್ಕರಿಸುವುದು ಮುಖ್ಯ. ಹಾಗೆಯೇ ರೈತನಿಂದ ಅಭಿವೃದ್ಧಿಪಡಿಸಿದ ತಳಿಯನ್ನು ನೋಂದಣಿಸುವಾಗ ರೈತನ ಪತ್ನಿಯ ಕೊಡುಗೆಗೂ ಸಹ ಮಾನ್ಯತೆ ನೀಡಲು ತಳಿಯ ಮೇಲೆ ಜಂಟಿ–ಒಡೆತನ ನೀಡುವುದು ಮುಖ್ಯ. ರೈತರು ತಳಿ ನೋಂದಣಿ ಮಾಡಲು ಅಥವಾ ನೋಂದಣಿ ನವೀಕರಿಸಲು ಯಾವುದೇ ರೀತಿಯ ಶುಲ್ಕ ಪಾವತಿಸಬೇಕಾಗಿಲ್ಲ. ಈ ರೀತಿಯ ಶುಲ್ಕವನ್ನು ಮನ್ನಾ ಮಾಡುವಿಕೆ ರೈತರಲ್ಲಿರುವ ವೈಜ್ಞಾನಿಕ ಮನೋಭಾವವನ್ನು ಗುರುತಿಸಲು ಮತ್ತು ಪ್ರೋತ್ಸಾಹಿಸಲು ಸಹಾಯವಾಗುತ್ತದೆ. ವೃತ್ತಿ ನಿರತ ತಳಿ ವಿಜ್ಞಾನಿಗಳು ಅಥವಾ ಸಾರ್ವಜನಿಕ ಸಂಶೋಧನ ಸಂಸ್ಥೆಗಳು ತಳಿ ನೋಂದಣಿಗೆ ಅಥವಾ ನವೀಕರಣಕ್ಕೆ ರೂ.5000–10000 ಶುಲ್ಕ ಪಾವತಿಸಬೇಕಾಗುತ್ತದೆ. ಆದರೆ ರೈತರಿಗೆ ತಳಿ ನೋಂದಣಿ ಮಾಡಲು ಈ ರೀತಿಯ ಶುಲ್ಕ ಮನ್ನಾ ಮಾಡುವುದು, ಈ ಕಾಯ್ದೆಯ ವಿಶೇಷ ವೈಶಿಷ್ಟ. ತಳಿ ನೋಂದಣಿಗೆ ರೈತರ ತಳಿಗಳು ಅರ್ಹತೆ ಪಡೆಯಬೇಕಿದ್ದರೆ, ತಳಿ ನೋಂದಣಿಗೆ ಅರ್ಹತಾ ಗುಣಗಳಾದ ಹೊಸತನ, ಭಿನ್ನತೆ, ಏಕರೂಪತೆ ಮತ್ತು ದೃಢತೆ ಗುಣಗಳನ್ನು ರೈತರ ತಳಿಗಳು ಸಹ ಹೊಂದಿರಬೇಕು.

## 3. ರೈತರ ಕೊಡುಗೆಯನ್ನು ಗುರುತಿಸುವ ಮತ್ತು ಅದನ್ನು ಪುರಸ್ಕರಿಸುವ ವಿಷಯಗಳ ಮೇಲೆ ರೈತರಿಗೆ ಇರುವ ಹಕ್ಕುಗಳು

ತಳಿ ವೈವಿಧ್ಯತೆಯನ್ನು ವೃದ್ಧಿಸುವಲ್ಲಿ ಮತ್ತು ಅದನ್ನು ಸಂರಕ್ಷಿಸುವಲ್ಲಿ ರೈತರು ನೀಡುತ್ತಿರುವ ಕೊಡುಗೆಯನ್ನು ಗುರುತಿಸಲು ಮತ್ತು ಅದನ್ನು ಪುರಸ್ಕರಿಸಲು ರೈತನಿಗೆ ಅಥವಾ ಒಂದು ರೈತ ಸಮುದಾಯ ಅಥವಾ ಬುಡಕಟ್ಟು ಸಮುದಾಯಕ್ಕೆ ಹಕ್ಕುಗಳನ್ನು

ಮಾನ್ಯ ಮಾಡಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಇದಕ್ಕಾಗಿ ಸ್ಥಾಪಿಸಿರುವ "ನ್ಯಾಷನಲ್ ಜೀನ್ ಫಂಡ್" ಮೂಲಕ ಅರ್ಹತಾ ರೈತ ಅಥವಾ ಸಮುದಾಯವನ್ನು ಗುರುತಿಸಿ, ಅವರಿಗೆ ಪುರಸ್ಕಾರ ಮಾಡಲಾಗುವುದು, ಹೀಗೆ ಮಾಡುವುದರಿಂದ ಸಸ್ಯ ತಳಿ ವೈವಿಧ್ಯತೆ ಸಂರಕ್ಷಣೆ ಮಾಡಿದ ರೈತ ಮತ್ತು ಬುಡಕಟ್ಟು ಸಮುದಾಯಕ್ಕೆ ಧನ ಸಹಾಯದ ಮೂಲಕ ಪ್ರೋತ್ಸಾಹ ನೀಡಿದಂತಾಗುತ್ತದೆ. ಸಾಂಪ್ರದಾಯಿಕ ಮತ್ತು ಕಾಡು ಜಾತಿಯ ಬೆಳೆ ತಳಿಗಳನ್ನು ರಕ್ಷಿಸುತ್ತಿರುವ ರೈತರು ಇಂತಹ ಪುರಸ್ಕಾರಕ್ಕೆ ಅರ್ಹರಾಗಿರುತ್ತಾರೆ.

## 4. ನೋಂದಣಿಸಿದ ರೈತರ ತಳಿಯಿಂದ ಬಂದ ಲಾಭವನ್ನು ಹಂಚಿಕೊಳ್ಳುವ ಹಕ್ಕುಗಳು

ಯಾವುದೇ ಹೊಸ ತಳಿಯನ್ನು ಅಭಿವೃದ್ಧಿ ಮಾಡಲು ಒಂದು ಅಥವಾ ಹೆಚ್ಚು ರೈತರ ತಳಿಗಳನ್ನು ಅಥವಾ ಅವುಗಳಿಂದ ಅಭಿವೃದ್ಧಿ ಹೊಂದಿದ ತಳಿಗಳನ್ನು ತಳಿ ಅಭಿವೃದ್ಧಿ ಕ್ರಿಯೆಯಲ್ಲಿ ಸಸ್ಯ ಸಂಪನ್ಮೂಲಗಳನ್ನಾಗಿ ಉಪಯೋಗಿಸಲಾಗುವುದು. ಈ ರೀತಿ ಉಪಯೋಗಿಸುವ ರೈತ ತಳಿಗಳ ಮೂಲ ಅಭಿವೃದ್ಧಿಗೆ ರೈತ ಅಥವಾ ಬುಡಕಟ್ಟು ಜನಾಂಗದ ಕೊಡುಗೆ ಇರುತ್ತದೆ. ನೋಂದಣಿಸಿದ ಹೊಸ ತಳಿಯು ಬಹಳ ಜನಪ್ರಿಯವಾಗಿ, ಅದರಿಂದ ಹೆಚ್ಚು ಲಾಭ ಬಂದರೆ, ತಳಿಯನ್ನು ನೊಂದಣಿಸಿದ ವ್ಯಕ್ತಿ ಅಥವಾ ಸಂಸ್ಥೆಯು ಎಲ್ಲ ಲಾಭವನ್ನು ಪಡೆಯುವ ಹಾಗಿಲ್ಲ. ಹೊಸ ತಳಿಯಿಂದ ಬಂದ ಲಾಭವನ್ನು ಹೊಸತಳಿಯ ಅಭಿವೃದ್ದಿಗೆ ಉಪಯೋಗಿಸಲಾದ ತಾಯಿ–ತಂದೆ ಮೂಲ ತಳಿಗಳನ್ನು ಅಭಿವೃದ್ಧಿಪಡಿಸಲು ಪ್ರಯತ್ನ ಮಾಡಿದ ರೈತ ಮತ್ತು ಬುಡಕಟ್ಟು ಸಮುದಾಯಗಳಿಗೂ ಹಂಚಲು ಸ್ಪಷ್ಟನೆ ನೀಡಲಾಗಿದೆ. ಈ ಕಾರಣಗಳಿಂದ, ಅರ್ಜಿದಾರರು ಹೊಸ ತಳಿ ನೋಂದಣಿಗೆ ಅರ್ಜಿ ಸಲ್ಲಿಸುವಾಗ ಹೊಸ ತಳಿಯ ಅಭಿವೃದ್ಧಿಗೆ ಉಪಯೋಗಿಸಿದ ತಾಯಿ–ತಂದೆ ತಳಿಗಳ ಮೂಲ ಮತ್ತು ಇತರ ಮಾಹಿತಿಯನ್ನು ಅರ್ಜಿಯಲ್ಲಿ ನಮೂದಿಸಬೇಕು. ಈ ವಿಷಯದಲ್ಲಿ ರೈತರು ತಮಗೆ ಬರುವ ಲಾಭವನ್ನು ಪಡೆಯಲು ಮನವಿ ಮಾಡಬಹುದಾಗಿದೆ. ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರವು ತಳಿ ನೋಂದಣಿಯನ್ನು ಪ್ರಕಟ ಮಾಡಿ ರೈತರು ತಳಿಯಿಂದ ಬರುವ ಲಾಭವನ್ನು ಪಡೆಯಲು ಮನವಿಗಳನ್ನು ಸಲ್ಲಿಸಲು ಜಾಹಿರಾತು ಮಾಡುತ್ತದೆ. ಈ ರೀತಿ ಜಾಹಿರಾತು ಪ್ರಕಟಣೆಯಾದ ಆರು ತಿಂಗಳ ಒಳಗೆ ರೈತರು ಮನವಿ ಸಲ್ಲಿಸಬೇಕು. ಪ್ರಾಧಿಕಾರವು

ಮನವಿಯಂತೆ ಪರಿಶೀಲಿಸಿ ಎಷ್ಟು ಲಾಭದ ಮೊತ್ತ, ರೈತರಿಗೆ ಹಂಚಿಕೆಯಾಗಬೇಕು ಅನ್ನುವುದನ್ನು ನಿರ್ಧರಿಸುತ್ತದೆ. ನೋಂದಣಿ ಮೂಲಕ ತಳಿ ಮಾಲೀಕತ್ವ ಪಡೆದ ವ್ಯಕ್ತಿ ಅಥವಾ ಸಂಸ್ಥೆಯು ಪ್ರಾಧಿಕಾರ ನಿರ್ಧರಿಸಿದ ಮೊತ್ತವನ್ನು "ನ್ಯಾಷನಲ್ ಜೀನ್ ಫಂಡ್"ಗೆ ಪಾವತಿಸಬೇಕಾಗುತ್ತದೆ. ಈ ಫಂಡ್‌ನಿಂದ ಅರ್ಹ ರೈತ ಸಮುದಾಯಕ್ಕೆ ಅಥವಾ ಬುಡಕಟ್ಟು ಸಮುದಾಯಕ್ಕೆ ಬರಬೇಕಾದ ಲಾಭದ ಭಾಗವನ್ನು ಕೊಡಲಾಗುತ್ತದೆ.

**ಈ ಕಾರಣಗಳಿಂದ ಹೊಸ ತಳಿಯಿಂದ ಬರುವ ಲಾಭ ಪಡೆಯಲು ರೈತರು**

1. ನೋಂದಣಿಸಿದ ಹೊಸ ತಳಿಗಳ ಬಗ್ಗೆ ಕಾಲಕಾಲಕ್ಕೆ ಮಾಹಿತಿ ಪಡೆಯುತ್ತಿರಬೇಕು.
2. ಲಾಭ ಪಡೆಯಲು ಅರ್ಹತಾ ರೈತರು ಮನವಿ ಸಲ್ಲಿಸುವ ಬಗ್ಗೆ ಪ್ರಕಟನೆ ಮಾಡುವ ಪ್ರಾಧಿಕಾರದ ಜಾಹಿರಾತುಗಳ ಬಗ್ಗೆ ತಿಳಿಯಬೇಕು.
3. ಹೊಸ ತಳಿಯಲ್ಲಿ ಅಭಿವೃದ್ಧಿಗೆ ಉಪಯೋಗಿಸಿರುವ ತಾಯಿ-ತಂದೆ ತಳಿಗಳ ಬಗ್ಗೆ ಪ್ರಾಧಿಕಾರ ಪ್ರಕಟಪಡಿಸುವ ಮಾಹಿತಿಗಳ ಬಗ್ಗೆ ತಿಳಿಯುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು.

## 5. ನೋಂದಣಿಸಿದ ತಳಿ ಬೀಜ ಉಪಯೋಗಿಸಿ ಬೆಳೆದ ಬೆಳೆಯಿಂದ ಆದ ನಷ್ಟಕ್ಕೆ ಪರಿಹಾರ ಪಡೆಯಲು ರೈತರಿಗಿರುವ ಹಕ್ಕುಗಳು

ತಳಿ ನೋಂದಣಿ ಮಾಡುವುದು, ತಳಿಯಿಂದ ಬರುವ ಆರ್ಥಿಕ ಲಾಭದ ಸಂಪೂರ್ಣ ಹಕ್ಕನ್ನು ಹೊಂದುವುದೇ ಈ ಕಾಯಿದೆಯ ಮುಖ್ಯ ಉದ್ದೇಶ. ಒಂದು ತಳಿಯು ಬಹಳ ಉತ್ತಮ ಫಲಿತಾಂಶ ನೀಡಿದಾಗ ಮಾತ್ರ ಆ ತಳಿಯ ಬೀಜಕ್ಕೆ ಬಹಳ ಬೇಡಿಕೆಯಾಗಿ, ಅದರ ಮಾರಾಟದಿಂದ ಹೆಚ್ಚು ಲಾಭ ಬರುವುದು. ಹಲವು ಕಂಪೆನಿಗಳು ತಳಿಯ ಮೇಲೆ ಹೆಚ್ಚು ಪ್ರಚಾರ ಕೊಟ್ಟು, ತಳಿ ಉತ್ತಮವಾಗಿದೆ ಎಂದು ರೈತರಿಗೆ ಆಶ್ವಾಸನೆ ಕೊಡುತ್ತವೆ. ಈ ಆಶ್ವಾಸನೆಯ ಮೇರೆಗೆ, ರೈತರು ಬಿತ್ತನೆ ಬೀಜ ಖರೀದಿಸಿ, ಅದರಿಂದ ನಿರೀಕ್ಷಿತ ಫಲಿತಾಂಶ ಬರದೆ, ಬೆಳೆ ನಷ್ಟವಾಗುವ ಪರಿಸ್ಥಿತಿ ಉಂಟಾಗಬಹುದು. ಇಂತಹ ಸನ್ನಿವೇಶದ ನಷ್ಟ ಹೊಂದಿದ ರೈತರು ಪ್ರಾಧಿಕಾರಕ್ಕೆ ಮನವಿ ಮಾಡಿ, ತಮಗುಂಟಾದ ಬೆಳೆ ನಷ್ಟಕ್ಕೆ ಪರಿಹಾರ ಕೇಳಬಹುದು. ಪ್ರಾಧಿಕಾರವು ರೈತರು ಸಲ್ಲಿಸಿದ ಮಾಹಿತಿಯನ್ನು

ಪರಿಶೀಲಿಸಿ, ರೈತರಿಗೆ ಪರಿಹಾರ ನೀಡುವಂತೆ ಕಂಪೆನಿಗಳಿಗೆ ನಿರ್ದೇಶನ ನೀಡುವುದು. ಈ ರೀತಿ, ಆದ ಬೆಳೆ ನಷ್ಟಕ್ಕೆ ಪರಿಹಾರ ಪಡೆಯಲು ರೈತರು ಸಾಕಷ್ಟು ಪುರಾವೆ ಮತ್ತು ಸಾಕ್ಷಾಧಾರಗಳನ್ನು ಒದಗಿಸಬೇಕು. ಹಾಗೂ ಬೆಳೆ ಬೆಳೆಯಲು ಕಂಪನಿ ಶಿಫಾರಸ್ಸು ಮಾಡಿದ ಉತ್ಪಾದನಾ ತಾಂತ್ರಿಕತೆಯನ್ನು ತಪ್ಪದೆ ಅನುಸರಿಸಬೇಕು. ಬೆಳೆ ಬೆಳೆಯಲು ಕಂಪನಿ ಶಿಫಾರಸ್ಸು ಮಾಡಿದ ಪ್ರದೇಶದ ಹೆಚ್ಚು ರೈತರು ಜೊತೆಗೂಡಿ ತಮಗುಂಟಾದ ಬೆಳೆ ನಷ್ಟದ ನಿಜವಾದ ಕಾರಣಗಳನ್ನು ನೀಡಿ ಪರಿಹಾರ ಪಡೆಯಲು ಅನುಕೂಲವಾಗುತ್ತದೆ.

## 6. ಸಾಂಪ್ರದಾಯಿಕ ತಳಿಗಳನ್ನು ಉಪಯೋಗಿಸಿರುವ ಬಗ್ಗೆ ಮಾಹಿತಿ ನೀಡದೆ ಅವುಗಳನ್ನು ತಳಿ ಅಭಿವೃದ್ಧಿಯಲ್ಲಿ ಉಪಯೋಗಿಸಿ, ಲಾಭ ಪಡೆದಿದ್ದರೆ ಅದರ ವಿರುದ್ಧ ಪರಿಹಾರ ಪಡೆಯುವ ರೈತರ ಹಕ್ಕುಗಳು

ಈಗಾಗಲೇ ತಿಳಿಸಿರುವಂತೆ ಹೊಸ ತಳಿಯ ಬೀಜ ಮಾರಾಟದಿಂದ ಬಂದ ಲಾಭವನ್ನು ಹಂಚಿಕೊಳ್ಳುವಾಗ, ತಳಿ ಅಭಿವೃದ್ಧಿಯಲ್ಲಿ ಉಪಯೋಗಿಸಿದ ಮೂಲ ತಳಿಗಳ ಬಗ್ಗೆ ಸಸ್ಯ ನೋಂದಣಿ ಅರ್ಜಿ ಸಲ್ಲಿಸುವವರು ಮಾಹಿತಿ ನೀಡಬೇಕು. ಹಲವು ಬಾರಿ ತಳಿಗಳ ಮೂಲ ಹಾಗೂ ಅದರ ವೈಶಿಷ್ಟ್ಯಗಳ ಮಾಹಿತಿ ದೊರೆಯದೆ ಅರ್ಜಿದಾರರು ತಳಿ ನೋಂದಣಿ ಅರ್ಜಿಯಲ್ಲಿ ಇದರ ಬಗ್ಗೆ ತಿಳಿಸಿರುವುದಿಲ್ಲ ಹಾಗೂ ರೈತ ಅಥವಾ ಬುಡಕಟ್ಟು ಸಮುದಾಯಕ್ಕೆ ಮೂಲ ತಳಿಗಳ ಬಗ್ಗೆ ಮಾಹಿತಿ ಇರುವುದಿಲ್ಲ. ಇದರಿಂದ ಹೊಸ ತಳಿಯ ಬೀಜ ಮಾರಾಟದಿಂದ ಬರುವ ಲಾಭವನ್ನು ಹಂಚಿಕೊಳ್ಳುವ ಭಾಗ್ಯ ರೈತರಿಗೆ ಸಿಗದಂತಾಗಬಹುದು/ ಇಂತಹ ಸನ್ನಿವೇಶಗಳಲ್ಲಿ, ರೈತ ಸಮುದಾಯ ಅಥವಾ ಬುಡಕಟ್ಟು ಜನಾಂಗದ ಪರವಾಗಿ ಮೂರನೇ ವ್ಯಕ್ತಿ, ತಳಿಯ ಬೀಜದಿಂದ ಬರುವ ಲಾಭದ ಪರಿಹಾರ ಕೇಳಬಹುದಾಗಿದೆ. ಈ ಅವಕಾಶವನ್ನು ಯಾವುದೇ ಒಬ್ಬ ವ್ಯಕ್ತಿ, ಸರ್ಕಾರೇತರ ಸಂಸ್ಥೆ, ಸರ್ಕಾರ ಅಥವಾ ಖಾಸಗಿ ಸಂಸ್ಥೆಗಳು ರೈತರ ಪರವಾಗಿ ಪರಿಹಾರ ದೊರಕಿಸಲು ಅರ್ಜಿ ಸಲ್ಲಿಸಬಹುದು. ಅರ್ಜಿಯನ್ನು ಮೂರನೇ ವ್ಯಕ್ತಿ ಪ್ರಾಧಿಕಾರಕ್ಕೆ ಸಲ್ಲಿಸಬಹುದಾಗಿದೆ. ಅರ್ಜಿಯನ್ನು ಪರಿಶೀಲಿಸಿದ ನಂತರ, ಪ್ರಾಧಿಕಾರವು ಮಾಹಿತಿ ಆಧಾರದ ಮೇಲೆ ಪರಿಹಾರವನ್ನು ಘೋಷಣೆ ಮಾಡುತ್ತದೆ. ಈ ಪರಿಹಾರ ಮೊತ್ತವನ್ನು ತಳಿಯ ಮೇಲೆ ಮಾಲೀಕತ್ವ ಹೊಂದಿದ ವ್ಯಕ್ತಿ ಅಥವಾ ಸಂಸ್ಥೆಯು 'ನ್ಯಾಷನಲ್ ಜಿನ್ ಫಂಡ್'ಗೆ ಪಾವತಿ ಮಾಡಬೇಕಾಗುತ್ತದೆ. ನಂತರ ನ್ಯಾಷನಲ್ ಜಿನ್ ಫಂಡ್ ರೈತ

ಸಮುದಾಯಕ್ಕೆ/ ಬುಡಕಟ್ಟು ಜನಾಂಗಕ್ಕೆ ಪರಿಹಾರದ ಮೊತ್ತವನ್ನು ವಿತರಿಸುತ್ತದೆ. ಈ ಕಾರಣಗಳಿಂದ, ಸಸ್ಯ ತಳಿ ಅಭಿವೃದ್ಧಿ ವಿಜ್ಞಾನದ ಬಗ್ಗೆ ಹಾಗೂ ಸಸ್ಯ ತಳಿಗಳ ಮೇಲೆ ಹೆಚ್ಚಿನ ಜ್ಞಾನ ಮತ್ತು ತಿಳುವಳಿಕೆಯಿದ್ದರೆ ಅರ್ಹತಾ ನವೀಕರಣಗಳನ್ನು ಪತ್ತೆ ಹಚ್ಚುವುದರ ಮೂಲಕ ಪರಿಹಾರ ದೊರಕಿಸಲು ಅನುಕೂಲವಾಗುತ್ತದೆ.

## 7. ನೋಂದಣಿಸಿದ ತಳಿಗಳ ಬಿತ್ತನೆ ಬೀಜದ ಮೇಲೆ ಇರುವ ರೈತರ ಹಕ್ಕುಗಳು :

ರೈತರಿಗೆ ಉತ್ತಮ ತಳಿಯ ಉತ್ತಮ ಗುಣಮಟ್ಟದ ಬೀಜ ದೊರೆಯಲು ಪ್ರೋತ್ಸಾಹ ನೀಡುವುದು ಹೊಸ ಕಾಯಿದೆಯ ಮುಖ್ಯ ಉದ್ದೇಶ. ಅಲ್ಲದೆ, ರೈತರಿಗೆ ಬಿತ್ತನೆ ಬೀಜವು ಸಾಕಷ್ಟು ಪ್ರಮಾಣದಲ್ಲಿ ಮತ್ತು ನ್ಯಾಯಯುತ ಬೆಲೆಯಲ್ಲಿ ದೊರೆಯುವಂತಾಗಬೇಕು. ಕಾಯಿದೆಯ ಅನ್ವಯ, ತಳಿ ಸಂವರ್ಧಕನ ಹಕ್ಕುಗಳನ್ನು ರಕ್ಷಣೆ ಮಾಡುವಲ್ಲಿ, ಅವನಿಗೆ ತಳಿಯ ಬೀಜೋತ್ಪಾದನೆ ಮತ್ತು ಮಾರಾಟದ ಮೇಲೆ ಸಂಪೂರ್ಣ ಹಕ್ಕನ್ನು ನೀಡಲಾಗುತ್ತದೆ. ಹಾಗೆಯೇ ಈ ಹಕ್ಕುಗಳನ್ನು ಮಾನ್ಯ ಮಾಡುವಾಗ ರೈತರ ಬೇಡಿಕೆ ಮತ್ತು ಹಿತಾಸಕ್ತಿಯನ್ನು ತಳಿ ಸಂವರ್ಧಕನು ಗಮನದಲ್ಲಿಟ್ಟುಕೊಂಡು, ಬೀಜದ ಬೆಲೆ, ಪೂರೈಕೆ ಮತ್ತು ಗುಣಮಟ್ಟದ ಅಂಶಗಳು ನ್ಯಾಯುತವಾಗಿರಬೇಕೆಂದು ಪ್ರಾಧಿಕಾರ ತಳಿ ಸಂವರ್ಧಕನಿಗೆ ನಿರ್ದೇಶನ ನೀಡುತ್ತದೆ. ತಳಿ ನೋಂದಣಿಸಿದ ಮೂರು ವರ್ಷಗಳ ಒಳಗೆ, ಮಾಲೀಕರು ರೈತರ ಬೇಡಿಕೆಗಳನ್ನು ನ್ಯಾಯಯುತವಾಗಿ ಪೂರೈಸದಿದ್ದರೆ ಅಂದರೆ, ಸಾಕಷ್ಟು ಬೀಜ ಪೂರೈಕೆ ಇಲ್ಲದೆ ಇರುವುದು, ಬೆಲೆ ಜಾಸ್ತಿಯಾಗುವುದು ಅಥವಾ ಬೀಜದ ಗುಣಮಟ್ಟ ಕಳಪೆಯಾಗಿದ್ದರೆ, ಇಂತಹ ವಿಷಯಗಳ ಬಗ್ಗೆ ರೈತರು ಪ್ರಾಧಿಕಾರಕ್ಕೆ ಫಿರ್ಯಾದು ಸಲ್ಲಿಸಬಹುದು. ಪ್ರಾಧಿಕಾರವು ಪಿರ್ಯಾದುಗಳನ್ನು ಸ್ವೀಕರಿಸಿ, ಪರಿಶೀಲಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬಹುದು. ಇಂತಹ ಕ್ರಮಗಳಲ್ಲಿ ತಳಿ ಮಾಲೀಕರಿಗೆ ಬೀಜ ಉತ್ಪಾದನೆ ಮತ್ತು ಮಾರಾಟದ ಮೆಲೆ ನೀಡಿರುವ ಸಂಪೂರ್ಣ ಹಕ್ಕುಗಳನ್ನು ನಿಗಧಿತ ಅವಧಿಯವರೆಗೆ ರದ್ದುಪಡಿಸಬಹುದು. ಹಾಗೂ ಮೂರನೇ ವ್ಯಕ್ತಿಗೆ ನೋಂದಣಿಸಿದ ತಳಿಯ ಬೀಜೋತ್ಪಾದನೆ ಮತ್ತು ಮಾರಾಟದ ಹಕ್ಕನ್ನು ವರ್ಗಾವಣೆ ಮಾಡಿ ಕಡ್ಡಾಯ ಪರವಾನಿಗೆಯನ್ನು ಜಾರಿ ಮಾಡಬಹುದು. ಆಗ ಪರವಾನಗಿ ಪಡೆದ ಮೂರನೇ ವ್ಯಕ್ತಿಯು ನೋಂದಣಿಸಿದ ತಳಿಯ ಬೀಜೋತ್ಪಾದನೆಯನ್ನು ಮಾಡಿ ಬೀಜಕ್ಕೆ ಇರುವ ಬೇಡಿಕೆಯನ್ನು ಪೂರೈಸುವುದಲ್ಲದೇ, ನ್ಯಾಯಯುತ ಬೆಲೆಗೆ ಬೀಜ ಮಾರಾಟ ಮಾಡಬೇಕಾಗುತ್ತದೆ.

## ೮. ಹಲವು ಉಚಿತ ಸೇವೆ ಪಡೆಯಲು ರೈತರಿಗಿರುವ ಹಕ್ಕುಗಳು

ರೈತರಿಗಿರುವ ಆರ್ಥಿಕ ದೌರ್ಬಲ್ಯತೆಯಿಂದ, ಅವರಿಗಿರುವ ಹಕ್ಕುಗಳನ್ನು ಪಡೆಯಲು ತೊಂದರೆಯಾಗದಂತೆ, ಹೊಸ ಕಾಯಿದೆಯಲ್ಲಿ ಹಲವಾರು ಆರ್ಥಿಕ ವಿನಾಯಿತಿಯನ್ನು ರೈತರಿಗೆ ನೀಡಲಾಗಿದೆ. ಇವುಗಳಲ್ಲಿ

1. ರೈತರು ಅಥವಾ ಒಂದು ರೈತ ಸಮುದಾಯವು ತಳಿ ನೋಂದಣಿ ಮಾಡಿದರೆ ಅದಕ್ಕೆ ಶುಲ್ಕ ತೆರಬೇಕಾಗಿಲ್ಲ.
2. ತಳಿ ನೋಂದಣಿಗೆ ಅವಶ್ಯಕವಾದ ಬೀಜ ಪರೀಕ್ಷೆ ಮಾಡಿಸಲು ಪಾವತಿಸಬೆಕಾಗುವ ಶುಲ್ಕ ಪಾವತಿಸಬೇಕಾಗಿಲ್ಲ.
3. ತಳಿ ನೋಂದಣಿ ಮತ್ತು ನವೀಕರಣಕ್ಕೆ ಶುಲ್ಕ ಪಾವತಿಸಬೇಕಾಗಿಲ್ಲ.
4. ಕಾಯ್ದೆಯ ಯಾವುದೇ ವಿಷಯದ ವಿರುದ್ಧ ಅಥವಾ ಲಾಭಾಂಶದ ಹಂಚಿಕೆಗೆ ಮನವಿ ಸಲ್ಲಿಸಲು ಶುಲ್ಕ ಪಾವತಿಸಬೇಕಾಗಿಲ್ಲ.

ಈ ರೀತಿ ಹಲವಾರು ವಿಷಯಗಳಲ್ಲಿ ರೈತರಿಗೆ ಶುಲ್ಕ ಪಾವತಿ ಮಾಡದ ಹಾಗೇ ಅವಕಾಶ ಕಲ್ಪಿಸಿ ರೈತರು ತಮಗಿರುವ ಆರ್ಥಿಕ ದೌರ್ಬಲ್ಯದಿಂದ, ಅವರಿಗೆ ಮಾನ್ಯ ಮಾಡಿರುವ ಹಕ್ಕುಗಳಿಂದ ವಂಚಿತರಾಗದೇ ಇರಲು ಅನುಕೂಲ ಮಾಡಲಾಗಿದೆ.

## ೯. ಮುಗ್ಧತೆಯಿಂದ ಮಾಡಿದ ತಪ್ಪಿಗೆ ರಕ್ಷಣೆ ಪಡೆಯುವ ರೈತರ ಹಕ್ಕುಗಳು

ಕಾಯಿದೆಯ ಅನ್ವಯ ರೈತರು ಮುಗ್ಧತೆಯಿಂದ ಮಾಡಿದ ತಪ್ಪನ್ನು ಒಪ್ಪಿಕೊಂಡರೆ ಅಂತಹವರಿಗೆ ನ್ಯಾಯಾಲಯ ರಕ್ಷಣೆ ಕೊಡುತ್ತದೆ. ಮುಗ್ಧತೆಯಿಂದ ಎಸಗಿದ ತಪ್ಪಿಗೆ ಪುರಾವೆಗಳನ್ನು ಮತ್ತು ಬೇಕಾದ ಮಾಹಿತಿಯನ್ನು ನೀಡಬೇಕು. ಹೆಚ್ಚು ರೈತರಿಗೆ ಕಡಿಮೆ ಶಿಕ್ಷಣ ಇರುವುದರಿಂದ ಹಾಗು ಖಾಸಗಿ ಬೀಜ ಕಂಪನಿಗಳು ರೈತರ ಮುಗ್ಧತೆಯನ್ನು ಶೋಷಣೆ ಮಾಡದಿರಲು ಕಾಯ್ದೆಯಲ್ಲಿ ಈ ವಿಶೇಷ ಅವಕಾಶ ಮಾಡಲಾಗಿದೆ.

## ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯಿದೆಯನ್ವಯ ಕೆಲವು ಸ್ಪಷ್ಟೀಕರಣಗಳು

ಯಾವುದೇ ಶಾಸನ ಮತ್ತು ಕರಡುಗಳಲ್ಲಿ ಉಪಯೋಗಿಸುವ ಪದಗಳ ಕಾನೂನು ರೀತ್ಯ ಸ್ಪಷ್ಟೀಕರಣವನ್ನು ಅರ್ಥ ಮಾಡಿಕೊಳ್ಳುವುದು ಶಾಸನದ ಉದ್ದೇಶವನ್ನು ಪೂರೈಸುವಲ್ಲಿ ಮತ್ತು ಸಫಲಗೊಳಿಸುವಲ್ಲಿ ಬಹಳ ಮುಖ್ಯವಾಗಿರುತ್ತದೆ. ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯಿದೆಯಲ್ಲಿ ಸಸ್ಯಯ ತಳಿ ರಕ್ಷಣೆಗೆ ಎಷ್ಟು ಪ್ರಾಮುಖ್ಯತೆ ಇದೆಯೋ ಅಷ್ಟೇ ಪ್ರಾಮುಖ್ಯತೆ ಕಾನೂನು ರೀತ್ಯ ರೈತ ಹಿತಾಸಕ್ತಿಗೂ ಸಹ ಇದೆ. ಆದ್ದರಿಂದ ಈ ಕಾಯಿದೆಯನ್ವಯ, ರೈತ ಎಂದರೆ ಯಾರು ಎಂಬುದನ್ನು ಅಥವಾ ಮಾಡಿಕೊಳ್ಳುವುದು ಬಹಳ ಮುಖ್ಯ. ಸಾಧಾರಣ ಅರ್ಥದಲ್ಲಿ ರೈತ ಎಂದರೆ ಕೃಷಿ ಮಾಡುವವನೂ, ಬೆಳೆ ಬೆಳೆಯುವವನು ಮತ್ತು ಪ್ರಾಣಿಗಳನ್ನು ಸಾಕುವವನು, ಎಂದು ಭಾವಿಸಲಾಗಿದೆ. ಆದರೆ ಈ ಸಸ್ಯ ತಳಿಗಳ ರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯಿದೆಯ ಪ್ರಕಾರ ರೈತ ಎಂದರೆ ಬೆಳೆಗಳನ್ನು ಬೆಳೆಯುವವನು, ಬೆಳೆ ತಳಿಗಳನ್ನು ಸಂರಕ್ಷಿಸುವವನು ಮತ್ತು ಸಾಂಪ್ರದಾಯಿಕ ತಳಿಗಳನ್ನು ಕಾಪಾಡುವವನು ಅಥವಾ ನಾಡ ತಳಿಗಳನ್ನು ಆಯ್ಕೆ ಮಾಡಿ ಹೊಸ ತಳಿಗಳನ್ನು ಅಭಿವೃದ್ಧಿಪಡಿಸುವವನು ಎಂದರ್ಥ. ಇಂತಹ ಎಲ್ಲಾ ವಿಷಯಗಳಲ್ಲಿ ಸಕ್ರಿಯ ಪಾತ್ರ ನಿರ್ವಹಿಸುವವನನ್ನು ರೈತ ಎಂದು ಪರಿಗಣಿಸಬೇಕಾಗಿದೆ. ಅಂದರೆ, ಈ ಕಾಯಿದೆ ರೈತನನ್ನು ಕೃಷಿಕನಾಗಿ, ತಳಿ ಸಂರಕ್ಷಕನಾಗಿ ಮತ್ತು ತಳಿ ವಿಜ್ಞಾನಿಯಾಗಿ ಗುರುತಿಸುತ್ತದೆ. ಇಂತಹ ರೈತರು ಹೆಣ್ಣಾಗಿರಲಿ ಅಥವಾ ಗಂಡಾಗಿರಲಿ ಮತ್ತು ಅವನಿಗೆ/ಅವಳಿಗೆ ಭೂಮಿ ಇರಲಿ ಅಥವಾ ಇಲ್ಲದೆ ಇರಲಿ, ಮೇಲೆ ತಿಳಿಸಿದ ತಳಿ ರಕ್ಷಣೆ ಮತ್ತು ತಳಿ ಅಭಿವೃದ್ಧಿ ಕ್ರಿಯೆಯಲ್ಲಿ ನಿರ್ವಹಿಸುವ ಪಾತ್ರವನ್ನು ಗುರುತಿಸಿ ಅಂತಹವರನ್ನು ರೈತ ಎಂದು ಪರಿಗಣಿಸಲಾಗಿದೆ.

ನಮ್ಮ ದೇಶದಲ್ಲಿ ಲಭ್ಯತೆ ಇರುವ ಭೌಗೋಳಿಕ ಹಾಗೂ ನೈಸರ್ಗಿಕ ಅನುಕೂಲತೆಗಳಿಂದ ಭಾರತೀಯ ರೈತ ಸಾಮಾನ್ಯವಾಗಿ ವಿವಿಧ ಬೆಳೆಗಳ ಹಾಗೂ ಪ್ರತಿ ಬೆಳೆಯಲ್ಲಿ ಒಂದಕ್ಕಿಂತ ಹೆಚ್ಚು ತಳಿಗಳನ್ನು ಬೆಳೆಯುತ್ತಾನೆ. ಈ ಬೆಳೆ ವೈವಿಧ್ಯತೆಯಿಂದ ರೈತನು ಹಳೆ ತಳಿಗಳನ್ನು ಸಂರಕ್ಷಿಸುವುದಲ್ಲದೆ, ಆ ತಳಿಗಳನ್ನು ಸೂಕ್ತ ಸನ್ನಿವೇಶಕ್ಕೆ ಹೊಂದಿಕೊಳ್ಳುವಂತೆ ಪರೀಕ್ಷೆ ಮಾಡುವುದರ ಮೂಲಕ ತಳಿಗಳನ್ನು ಆಯ್ಕೆ ಮಾಡುವ

ಕಾರ್ಯ ಮಾಡುತ್ತಾನೆ ಆದ್ದರಿಂದ ಪ್ರತಿ ರೈತ ಸಮುದಾಯವು ಹಲವು ತಳಿಗಳನ್ನು ಒಂದು ನಿರ್ದಿಷ್ಟ ಕಾಲದಲ್ಲಿ ಸಂರಕ್ಷಣೆ ಮಾಡುವ ಕಾರ್ಯ ನಿರ್ವಹಿಸುವುದು ಎಲ್ಲರಿಗೂ ತಿಳಿಸಿರುವ ವಿಷಯ. ತನ್ನ ಹೊಲದಲ್ಲೇ ಹಲವು ತಳಿಗಳನ್ನು ಬೆಳೆಯುವಾಗ ನಾಡ ಜಾತಿಯ ತಳಿಗಳನ್ನು ಒಂದು ನಿರ್ದಿಷ್ಟ ಪ್ರದೇಶದಲ್ಲಿ ಬೆಳೆಯುವುದರ ಮೂಲಕ ಅವುಗಳ ಸಂರಕ್ಷಣೆಯನ್ನು ಸಹ ಮಾಡುತ್ತಾನೆ. ಹೀಗೆ, ನಮ್ಮ ದೇಶದಲ್ಲಿ ತಳಿ ಸಂರಕ್ಷಣೆ ಮತ್ತು ತಳಿ ಆಯ್ಕೆ ಪರಸ್ಪರ ಜೊತೆಯಲ್ಲಿ ಹಾಗೂ ಏಕಕಾಲದಲ್ಲಿ ಸಾಗುತ್ತವೆ. ಸಸ್ಯ ತಳಿ ಆಯ್ಕೆ ಮಾಡುವುದಕ್ಕೆ ತಳಿಯ ಗುಣಗಳ ಬಗ್ಗೆ ಅಪಾರ ಜ್ಞಾನ ಮತ್ತು ಅನುಭವ ಇರಬೇಕು. ಇಂತಹ ತಳಿಗಳಿಗೆ ಸಂಬಂಧದಿಸಿದ ಜ್ಞಾನವು ಹಲವು ವರ್ಷಗಳ ಅನುಭವದ ಮೂಲಕ ದೊರೆಯುತ್ತದೆ. ಪ್ರತಿ ತಳಿಯನ್ನು ಆಯ್ಕೆ ಮಾಡುವಾಗ ಅದರಲ್ಲಿ ರೈತರ ಭೌದ್ಧಿಕ ಕೊಡುಗೆ ಹಲವು ಸಾಂಪ್ರದಾಯಿಕ ತಳಿಗಳ ಅಭಿವೃದ್ಧಿಗೆ ಕಾರಣವಾಗಿದೆ. ರೈತರಿಂದ ಅಭಿವೃದ್ಧಿಪಡಿಸಿದ ಹಲವು ತಳಿಗಳು, ತಳಿ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ ತಳಿಗಳು ಸಹ ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯಿದೆ ಅನ್ವಯ, ರಕ್ಷಣೆ ಪೆರಯುವ ಎಲ್ಲಾ ರೀತಿಯ ಅರ್ಹತೆಯನ್ನು ಹೊಂದಿರುತ್ತವೆ.

## ಸಸ್ಯ ತಳಿ ನೋಂದಣಿ ಮತ್ತು ಅದರ ಸಂಬಂಧಿತ ವಿವರಗಳು

### ತಳಿ ನೋಂದಣಿಯ ಅರ್ಥ ಮತ್ತು ಮೂಲ

ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯಿದೆ ಅನ್ವಯ, ತಳಿ ನೋಂದಣಿ ಒಂದು ಕಾನೂನು ಕ್ರಿಯೆ. ತಳಿ ನೋಂದಣಿಗೆ ಅರ್ಜಿ ಸಲ್ಲಿಸುವವನಿಗೆ ತಳಿಯ ಮೇಲೆ ಮಾಲೀಕತ್ವ ಪಡೆಯಲು ಈ ತಳಿ ನೋಂದಣಿ ಸಹಾಯಕವಾಗುತ್ತದೆ. ಆಸ್ತಿ ನೋಂದಣಿಯ ಮೂಲ ಆಸ್ತಿಯ ಮೇಲೆ ಕಾನೂನು ರೀತ್ಯ ಮಾಲೀಕತ್ವ ಪಡೆಯುವಂತೆ, ತಳಿ ನೋಂದಣಿ ಕ್ರಿಯೆ ನೋಂದಣಿದಾರನಿಗೆ, ತಳಿಯ ಮೇಲೆ ಕಾನೂನು ರೀತ್ಯ ಮಾಲಿಕತ್ವವನ್ನು ನೀಡುತ್ತದೆ. ಈ ಹಕ್ಕು ಅನುವಂಶಿಕವಾಗಿ ವರ್ಗಾವಣೆ ಆಗಬಹುದು. ಇತರರಿಗೆ ಒಪ್ಪಂದದ ಮೇಲೆ ವರ್ಗಾವಣೆ ಅಥವಾ ಮಾರಾಟ ಮಾಡಬಹುದು. ಆಸ್ತಿಯ ನೋಂದಣಿಯ ಮೂಲಕ, ಆಸ್ತಿಯ ಮೇಲೆ ಸಿಗುವ ಹಕ್ಕು ಶಾಶ್ವತವಿರುತ್ತದೆ, ಆದರೆ ತಳಿಯ ನೊಂದಣಿಯಿಂದ ದೊರೆಯುವ ತಳಿಯ ಮೇಲಿನ ಹಕ್ಕು ಶಾಶ್ವತ ಇರದೆ ನಿಗದಿತ ಕಾಲಾವಧಿಯವರೆಗೆ ಮಾತ್ರ ಇರುತ್ತದೆ. ಈ ಕಾಲಾವಧಿ ಮುಗಿದ ನಂತರ, ಸಸ್ಯ ತಳಿಯ ಮೇಲಿನ ಮಾಲೀಕತ್ವ

ಅಂತ್ಯಗೊಳ್ಳುತ್ತದೆ. ಇದಲ್ಲದೆ, ನಿಗಧಿತ ಕಾಲಾವಧಿಯಲ್ಲಿ ವಾರ್ಷಿಕ ನೋಂದಣಿ ನವೀಕರಣ ಶುಲ್ಕವನ್ನು ಪ್ರಾಧಿಕಾರಕ್ಕೆ ಪಾವತಿ ಮಾಡದಿದ್ದರೆ ಸಸ್ಯ ತಳಿಯ ಮೇಲಿನ ಹಕ್ಕು ರದ್ದಾಗುತ್ತದೆ.

ತಳಿ ಅಭಿವೃದ್ಧಿ ಕಾರಣಕರ್ತರು ಮತ್ತು ಅವರ ಪಾರಂಪರಿಕ ವಾರಸುದಾರರು ಅಥವಾ ಸೂಚಿಸಿದವರು ತಳಿ ನೋಂದಣಿ ಮಾಡಲು ಅರ್ಹರಾಗಿರುತ್ತಾರೆ. ರೈತರಿಗೆ ಸಂಬಂಧಿಸಿದಂತೆ, ತಳಿ ನೋಂದಣಿಗೆ ಅರ್ಜಿ ಸಲ್ಲಿಸಲು ಒಬ್ಬ ರೈತ ಅಥವಾ ರೈತ ಸಮುದಾಯ ಅರ್ಹರಾಗಿರುತ್ತಾರೆ. ಅರ್ಜಿ ಸಲ್ಲಿಸಬಯಸುವವ ರೈತರು, ತಳಿಯ ಅಭಿವೃದ್ಧಿಗೆ ಮತ್ತು ಅದರ ಸಂರಕ್ಷಣೆಗೆ ಪೂರಕವಾದ ಪುರಾವೆಗಳು ಮತ್ತು ಸಾಕ್ಷ್ಯಾಧಾರಿತ ಮಾಹಿತಿಯನ್ನು ಹೊಂದಿರಬೇಕು. ತಳಿ ಅಭಿವೃದ್ಧಿಗೆ ಒಬ್ಬ ರೈತ ಅಥವಾ ರೈತ ಸಮುದಾಯ ನೀಡಿದ ಕೊಡುಗೆಯ ಬಗ್ಗೆ ಮೂಲ ಮಾಹಿತಿ ಇರದಿದ್ದರೆ, ಅಂತಹ ಸಂದರ್ಭಗಳಲ್ಲಿ, ರೈತರ ತಳಿಗಳನ್ನು ಸಂರಕ್ಷಣೆ ಮಾಡುತ್ತಿರುವ ಸಮುದಾಯಕ್ಕೆ ತಳಿ ನೋಂದಣಿ ಮಾಡಿಸಲು ಅರ್ಹತೆ ದೊರೆಯುವುದು.

ನಮ್ಮ ದೇಶದಲ್ಲಿ ಬೀಜ ಆಯ್ಕೆ, ಕೃಷಿ ಮತ್ತು ಬೀಜ ಸಂರಕ್ಷಣೆ ಚಟುವಟಿಕೆಗಳು ಮನೆ ಮನೆ ಕೆಲಸಗಳಾಗಿದ್ದು, ಒಂದು ಕುಟುಂಬದಲ್ಲಿನ ಗಂಡು ಅಥವಾ ಹೆಣ್ಣು ಸದಸ್ಯರು ಕೃಷಿ ಚಟುವಟಿಕೆಗಳಲ್ಲಿ ತಮ್ಮದೇ ಆದ ಪಾತ್ರ ಮತ್ತು ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ಈ ಕಾರಣಗಳಿಂದ, ಪ್ರತಿಯೊಬ್ಬ ಕುಟುಂಬ ಸದಸ್ಯರು ಸಹ ತಳಿ ಅಭಿವೃದ್ಧಿಯ ಮತ್ತು ಸಂರಕ್ಷಣೆಯ ಮೂಲಕ ದೊರೆಯುವ ಹಕ್ಕು ಭಾದ್ಯತೆಗಳ ಮೇಲೆ ಸಮಭಾಗ ಪಡೆಯಲು ಅರ್ಹರಾಗಿರುತ್ತಾರೆ.

## ನೋಂದಣಿಸಬಹುದಾದ ಬೆಳೆ - ತಳಿಗಳು

ಕಾಯಿದೆಯಲ್ಲಿ ಯಾವ ಬೆಳೆಯ ತಳಿಗಳನ್ನು ನೋಂದಣಿಗೆ ಅರ್ಹ ಎಂದು ಸ್ಪಷ್ಟೀಕರಣ ನೀಡಿಲ್ಲ ಆದರೆ ಕಾಯಿದೆ ಅನ್ವಯ, ಕೇಂದ್ರ ಸರ್ಕಾರ ಗೆಜೆಟ್‌ನಲ್ಲಿ ಅಧೀಕೃತವಾಗಿ ಪ್ರಕಟಪಡಿಸುವ ಬೆಳೆಗಳ ತಳಿಗಳು ನೋಂದಣಿಗೆ ಅರ್ಹವಾಗಿರುತ್ತವೆ. ಉದಾಹರಣೆಗೆ ಭತ್ತ, ಗೋಧಿ, ಮುಸುಕಿನಜೋಳ, ಕಡಲೆ, ಕಬ್ಬು ಇತ್ಯಾದಿ ಬೆಳೆಗಳು ಕಾಯಿದೆ ಅನ್ವಯ ನೋಂದಣಿ ಹೊಂದಲು ಅರ್ಹ ಎಂದು ಕೇಂದ್ರ ಸರ್ಕಾರ ಪ್ರಕಟಿಸಿದರೆ, ಅಂತಹ ಬೆಳೆಗ "ಹೊಸ ತಳಿಗಳು", ಚಾಲ್ತಿಯಲ್ಲಿರುವ ತಳಿಗಳು ಮತ್ತು "ರೈತರ ತಳಿಗಳು"

ನೋಂದಣಿಗೆ ಅರ್ಹವಾಗಿರುತ್ತವೆ. ಗೆಜೆಟ್‌ನಲ್ಲಿ ಪ್ರಕಟವಾಗದ ಬೆಳೆಗಳ ತಳಿಗಳು ನೋಂದಣಿ ಮಾಡಿಸಲು ಅರ್ಹವಾಗಿರುವುದಿಲ್ಲ

## ರೈತರ ತಳಿಗಳು

ಈ ತಳಿಗಳು ರೈತರಿಂದ ಅಭಿವೃದ್ಧಿಪಡಿಸಿದ ಸಾಂಪ್ರದಾಯಿಕ ತಳಿಗಳಾಗಿದ್ದು ರೈತರಿಂದಲೇ ಸಂರಕ್ಷಿಸಲ್ಪಟ್ಟಿರುತ್ತವೆ. ಉದಾಹರಣೆಗೆ ದೇಶೀ ತಳಿಗಳು, ನಾಡ ತಳಿಗಳು ಮತ್ತು ಕಾಡು ಜಾತಿಯ ಸಸ್ಯ ತಳಿಗಳು. ಈ ಎಲ್ಲಾ ತಳಿಗಳ ಬಗ್ಗೆ ರೈತರಿಗೆ ಪರಿಜ್ಞಾನವಿರುತ್ತದೆ. ಸಾಮಾನ್ಯವಾಗಿ, ಇಂತಹ ಬಹಳಷ್ಟು ತಳಿಗಳು ಸಾಮೂಹಿಕವಾಗಿ ರೈತ ಸಮುದಾಯದಿಂದ ಅಭಿವೃದ್ಧಿ ಹೊಂದಿ, ಸಂರಕ್ಷಣೆ ಮಾಡಲ್ಪಟ್ಟಿರುತ್ತವೆ. ಅಂದರೆ ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯಿದೆಯು ರೈತ ತಳಿಗಳನ್ನು ನೋಂದಣಿ ಮಾಡುವಲ್ಲಿ ರೈತರು ಸಹ ಅರ್ಹರೆಂದು ಮಾನ್ಯ ಮಾಡುವುದರ ಮೂಲಕ, ಸಾಂಪ್ರದಾಯಿಕ ತಳಿಗಳ ಮೇಲೆ ರೈತರಿಗಿರುವ ಹಕ್ಕನ್ನು ಎತ್ತಿ ಹಿಡಿಯುತ್ತದೆ.

### 1. ಚಾಲ್ತಿಯಲ್ಲಿರುವ ತಳಿಗಳು

ಇಂತಹ ತಳಿಗಳು ನಮ್ಮ ದೇಶದ ಸಾರ್ವಜನಿಕ ಮತ್ತು ಖಾಸಗಿ ಸಂಶೋಧನಾ ಸಂಸ್ಥೆಗಳಿಂದ ಅಭಿವೃದ್ಧಿ ಹೊಂದಿದ್ದು ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದ ಅಧೀಕೃತವಾಗಿ ವ್ಯವಸಾಯ ಮಾಡಲು ಬಿಡುಗಡೆ ಮಾಡಲಾಗಿರುತ್ತವೆ. ಈ ತಳಿಗಳಿಗೆ, ಬಿಡುಗಡೆ ಮಾಡಿದ ದಿನದಿಂದ 15 ವರ್ಷಗಳು ತುಂಬಿರುವುದಿಲ್ಲ.

### 2. ಹೊಸ ತಳಿಗಳು

ಇಂತಹ ತಳಿಗಳು ತಳಿ ವಿಜ್ಞಾನಿಗಳಿಂದ ಅಥವಾ ರೈತರಿಂದ ಹೊಸದಾಗಿ ಅಭಿವೃದ್ಧಿ ಮಾಡಿರುವ ತಳಿಗಳಾಗಿರುತ್ತವೆ.

## ತಳಿ ನೋಂದಣಿಗೆ ಇರಬೇಕಾದ ತಳಿಯ ವಿಶೇಷ ಅರ್ಹತಾ ಗುಣಗಳು

ಕಾಯಿದೆ ಅನ್ವಯ, ಗೆಜೆಟ್‌ನಲ್ಲಿ ಪ್ರಕಟಪಡಿಸಿದ ಬೆಳೆಗಳ ಹೊಸ ತಳಿಗಳು, ರೈತರ ತಳಿಗಳ ಮತ್ತು ಚಾಲ್ತಿಯಲ್ಲಿರುವ ತಳಿಗಳು, ಈ ಕೆಳಗೆ ತಿಳಿಸಿದ ಅವಶ್ಯಕ ಅಂಶಗಳನ್ನು ಈಡೇರಿಸಿದಾಗ, ಅಂತಹ ತಳಿಗಳು ನೋಂದಣಿಗೆ ಅರ್ಹತೆಯನ್ನು ಪಡೆಯುತ್ತವೆ.

ತಳಿಗಳಿಗೆ ಭಿನ್ನತೆ, ಏಕರೂಪತೆ ಮತ್ತು ದೃಢತೆಯ ಗುಣಗಳಿರಬೇಕು.

ಒಂದು ವಲಯ ಅಥವಾ ಪ್ರಾಂತ್ಯದ ರೈತರಿಗೆ, ಆ ಪ್ರದೇಶದಲ್ಲಿ ಬೆಳೆಯುತ್ತಿರುವ ತಳಿಗಳ ಬಗ್ಗೆ ಮತ್ತು ಅವುಗಳ ಗುಣಗಳ ಬಗ್ಗೆ ಪರಿಜ್ಞಾನ ಇರುತ್ತದೆ. ಈ ಪರಿಜ್ಞಾನ ಒಂದು ತಳಿಯ ವಿಶೇಷ ಗುಣಗಳನ್ನು ಇನ್ನೊಂದು ತಳಿಯ ಗುಣಗಳೊಡನೆ ಹೋಲಿಸಲು ಅಥವಾ ಬಿನ್ನತೆಯನ್ನು ಗುರುತಿಸಲು ಸಹಾಯವಾಗುತ್ತದೆ. ಈ ರೀತಿ, ದೇಶದ ಇತರ ಭಾಗಗಳಲ್ಲಿ ಅಥವಾ ಇತರ ದೇಶಗಳಲ್ಲಿ ಬೆಳೆಯುತ್ತಿರುವ ಆ ತಳಿಯ ಗುಣ ವಿಶೇಷಗಳನ್ನು ಪತ್ತೆ ಹಚ್ಚುವುದಕ್ಕೆ ಸಹಾಯವಾಗುತ್ತದೆ. ಅಲ್ಲದೇ ಇದೇ ಗುಣಗಳು ಒಂದು ತಳಿಯನ್ನು ವಿವಿಧ ಸ್ಥಳಗಳಲ್ಲಿ ಬೆಳೆದಾಗ ಆ ತಳಿಯನ್ನು ಗುರುತಿಸುವುದಕ್ಕೆ ಅನುಕೂಲವಾಗುತ್ತದೆ. ಹಲವು ಬಾರಿ ಒಂದೇ ತಳಿಯು ಬೇರೆ ಬೇರೆ ಸ್ಥಳಗಳಲ್ಲಿ ಗುಣ ಬದಲಾವಣೆ ಹೊಂದಬಹುದು. ಉದಾಹರಣೆಗೆ ತಳಿಯ ಸ್ಥಳದ ಮತ್ತು ವಾತಾವರಣಕ್ಕೆ ಹೊಂದಿಕೆ, ತಳಿಯ ಅವಧಿ, ಎತ್ತರ ಇತ್ಯಾದಿ. ಈ ಎಲ್ಲಾ ಗುಣಗಳು ಒಂದು ತಳಿಯನ್ನು ಗುರುತಿಸುವುದಕ್ಕೆ ಸಹಾಯವಾಗುತ್ತದೆ.

ಹಲವೊಮ್ಮೆ ಸಾಂಪ್ರದಾಯಿಕ ಕೃಷಿಯಿಂದ ತಳಿಗಳ ಮಿಶ್ರಣ ಆಗಬಹುದು. ಒಂದು ತಳಿಗಿಂತ ಹೆಚ್ಚು ತಳಿಗಳು ಮಿಶ್ರಣವಾದಲ್ಲಿ, ತಳಿ ಮಿಶ್ರಿತ ರೈತರ ತಳಿಗಳನ್ನು ಕಾಣಬಹುದು. ಇಂತಹ ಮಿಶ್ರಣದಿಂದ ತಳಿಯ ಗುರುತಿಸುವಿಕೆ ಕಷ್ಟವಾಗಬಹುದು. ಈ ಮಿಶ್ರಣ ತಳಿಗಳಲ್ಲಿ ಏಕರೂಪತೆ ಮತ್ತು ದೃಢತೆಯ ಗುಣಗಳು ಇಲ್ಲದೇ ಇರಬಹುದು. ಆಯ್ಕೆಯ ಮೂಲಕ ಮಿಶ್ರ ತಳಿಗಳನ್ನು ಬೇರ್ಪಡಿಸಿ, ತಳಿ ಪರಿಶುದ್ಧತೆ ಮಾಡಬೇಕಾಗುತ್ತದೆ. ಪರಿಶುದ್ಧತೆ ಹೊಂದಿದ ತಳಿಗಳು ಬಿನ್ನತೆ, ಏಕರೂಪತೆ ಮತ್ತು ದೃಢತೆ ಗುಣಗಳನ್ನು ಹೊಂದಿದ್ದರೇ, ಅಂತಹ ರೈತರ ತಳಿಗಳು ನೋಂದಣಿಗೆ ಅರ್ಹವಾಗಿರುತ್ತವೆ.

ತಳಿಯ ಏಕರೂಪತೆ ಅಂದರೆ, ವಿವಿಧ ಬೀಜ ಲಾಟ್‌ಗಳಿಂದ ಬೀಜ. ಮಾದರಿ ತೆಗೆದು ಬೆಳೆದಾಗ, ತಳಿಯ ಗುಣಗಳು ಎಷ್ಟರ ಮಟ್ಟಿಗೆ, ಏಕರೂಪತೆ ಪ್ರದರ್ಶಿಸುತ್ತವೆ ಎಂಬುದೇ ತಳಿಯ ಏಕರೂಪತೆ ಗುಣ. ಬೆಳೆಗಳ ಸಂತಾನಾಭಿವೃದ್ಧಿಯ ವಿಧಾನಗಳ ಆಧಾರದ ಮೇಲೆ, ಈ ತಳಿ ತಳಿ ಏಕರೂಪತೆಯ ಗುಣ ನಿರ್ಧರಿತ ಮಟ್ಟ ಅವಲಂಬಿಸಿರುತ್ತದೆ.

ಮೇಲೆ ತಿಳಿಸಿದ ಭಿನ್ನತೆ, ಏಕರೂಪತೆ ಮತ್ತು ಸ್ಥಿರತೆ ಗುಣಗಳಿಲ್ಲದೆ, ಹೊಸ ತಳಿಗಳಲ್ಲಿ ಹೊಸತನ ಗುಣವು ಸಹ ಇರಬೇಕು ಹೊಸತನ ಎಂದರೆ, ಒಂದು ತಳಿಯು ದೇಶದಲ್ಲಿ ಕಳೆದ ಒಂದು ವರ್ಷಕ್ಕೆ ಹೆಚ್ಚು ಕಾಲ ವಾಣಿಜ್ಯ ಬೇಸಾಯದಲ್ಲಿರಬಾರದು. ಈ ಹೊಸತನ ವೈಶಿಷ್ಟ ಗುಣ ರೈತರ ತಳಿಗಳು ಮತ್ತು ಚಾಲ್ತಿಯಲ್ಲಿರುವ ತಳಿಗಳಿಗೆ ಅನ್ವಯವಾಗುವುದಿಲ್ಲ. ಕಾರಣ ಈ ತಳಿಗಳು ಬಹಳ ವರ್ಷಗಳಿಂದ ಈಗಾಗಲೇ ರೈತರ ಬಳಕೆ ಮತ್ತು ಬೇಸಾಯದಲ್ಲಿರುತ್ತವೆ.

## ತಳಿ ನೋಂದಣಿಯ ಮೂಲಕ ಬರುವ ತಳಿಯ ಮೇಲಿನ ಮಾಲೀಕತ್ವ

ಒಂದು ತಳಿಯನ್ನು ಇಬ್ಬರು ಅಥವಾ ಇಬ್ಬರಿಗಿಂತ ಹೆಚ್ಚು ವ್ಯಕ್ತಿಗಳು ತಳಿ ನೋಂದಣಿ ಮಾಡಿಸಿದಾಗ, ಪ್ರತಿಯೊಬ್ಬರು ತಳಿಯ ಮಾಲೀಕತ್ವದ ಮೇಲೆ ಸಮ ಹಕ್ಕು ಭಾದ್ಯತೆಗಳನ್ನು ಹೊಂದಿರುತ್ತಾರೆ. ಒಂದು ಸಮುದಾಯವು ತಳಿ ನೋಂದಣಿಸಿದಾಗ ಆ ಸಮುದಾಯದ ಪ್ರತಿ ಸದಸ್ಯನಿಗೂ, ಆ ತಳಿಯ ಮೇಲೆ ಸಮ ಮಾಲೀಕತ್ವವನ್ನು ಅನುಭವಿಸುವ ಅವಕಾಶ ಇರುತ್ತದೆ. ಒಂದು ಭೌಗೋಳಿಕ ಪರಿಮಿತಿಯಲ್ಲಿ (ಪಂಚಾಯತ್/ ಕಂದಾಯ/ರಾಜಕೀಯ ಪರಿಮಿತಿಗಳು)ರುವ ರೈತ ಅಥವಾ ರೈತ ಸಮುದಾಯಗಳೆಂದರೆ, ಆ ಪರಿಮಿತಿಯಲ್ಲಿ ಕೃಷಿ ಮಾಡುತ್ತಿರುವ ಅಥವಾ ಸಸ್ಯ ತಳಿ ಸಂಪನ್ಮೂಲಗಳನ್ನು ಸಂರಕ್ಷಿಸುತ್ತಿರುವ ಹಲವಾರು ರೈತ ಕುಟುಂಬಗಳು ಆ ಸಮುದಾಯದ ಪರಿಮಿತಿ ಅಥವಾ ವ್ಯಾಪ್ತಿಗೆ ಸೇರಿರುತ್ತವೆ. ಒಂದು ಸಮುದಾಯದ ಸಮ ಮಾಲೀಕತ್ವವೆಂದರೆ, ಸಮುದಾಯದ ಪ್ರತಿ ಸದಸ್ಯನಿಗೂ ನೋಂದಣಿಸಿದ ತಳಿಯ ಬೀಜವನ್ನು ಉತ್ಪಾದಿಸುವ, ಮಾರಾಟ ಮಾಡುವ, ಇತರರಿಗೆ ಹಕ್ಕನ್ನು ಪರವಾನಗಿ ಅಥವಾ ಮಾರಾಟ ಮಾಡುವ ಸಮನಾದ ಹಕ್ಕು ಇರುತ್ತದೆ. ಅದರಂತೆಯೇ, ತಳಿ ಮಾಲೀಕತ್ವದ ಹಕ್ಕುಗಳ ಹಿತಾಸಕ್ತಿಯನ್ನು ಕಾಪಾಡುವ ಜವಾಬ್ದಾರಿಯು ಸಹ ಪ್ರತಿಯೊಬ್ಬ ಸದಸ್ಯರಿಗೂ ಇರುತ್ತದೆ. ಸಾಮಾನ್ಯ ಆಸ್ತಿಯ ಮೇಲೆ ಹೇಗೆ ಸಮುದಾಯ ಕಾನೂನುಗಳು ಇರುತ್ತವೆಯೋ, ಹಾಗೆಯೇ ತಳಿಯ ಮೆಲೆ ಸಮುದಾಯದ ಮಾಲೀಕತ್ವ ಇರುತ್ತದೆ. ಸಮುದಾಯ ಕಾನೂನುಗಳು ಇರದೇ ಇದ್ದಲ್ಲಿ, ಸಸ್ಯ ತಳಿಯ ಮೇಲಿನ ಮಾಲೀಕತ್ವದ ಹಕ್ಕನ್ನು ಚಲಾಯಿಸಲು ಕಾನೂನು ರೀತ್ಯ ಸೂಕ್ತ ಮಾರ್ಗದರ್ಶಿ ಅಥವಾ ರೂಪುರೇಷೆಗಳನ್ನು ರಚಿಸಿಕೊಳ್ಳಬೇಕಾಗುತ್ತದೆ.

ಕಾಯ್ದೆ ಅನ್ವಯ, ಸೂಕ್ತ ಅರ್ಜಿ ಸಲ್ಲಿಸುವುದರ ಮೂಲಕ ತಳಿ ನೋಂದಣಿಗೆ ಅರ್ಹತೆ ಪಡೆಯುತ್ತದೆ. ಒಂದು ತಳಿಯ ಅಭಿವೃದ್ಧಿ ಅಥವಾ ಸಂರಕ್ಷಣೆಯಲ್ಲಿ ಪ್ರಯತ್ನಗಳು ಕೂಡಿದ್ದರೆ, ತಳಿ ನೋಂದಣಿಗೆ ಅರ್ಜಿ ಸಲ್ಲಿಸಲು ಆ ಸಮುದಾಯ ಮಾತ್ರ ಅರ್ಹರಾಗಿರುತ್ತದೆ. ಸಮುದಾಯದ ಸದಸ್ಯನೊಬ್ಬ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸುವಂತಿಲ್ಲ. ಒಂದು ಸಮುದಾಯ ಮೂಲದಿಂದ ಬಂದ ತಳಿಯನ್ನು ಉಪಯೋಗಿಸಿ ಹೊಸ ತಳಿ ಅಭಿವೃದ್ಧಿ ಮಾಡಿದ್ದರೆ, ಹೊಸ ತಳಿಯಿಂದ ಬಂದ ಲಾಭವನ್ನು ಪಡೆಯಲು ಸಮುದಾಯಕ್ಕೆ ಅವಕಾಶವಿರುತ್ತದೆ. ಹೀಗೆ ಸಸ್ಯ ತಳಿ ಮಾಲೀಕತ್ವದ ಹಕ್ಕನ್ನು ರೈತ ಸಮುದಾಯ ಪಡೆಯಲು ಅರ್ಹವಾಗಿರುತ್ತದೆ. ಸಮುದಾಯ ಇಷ್ಟಪಟ್ಟಲ್ಲಿ, ತಳಿಯ ಮಾಲೀಕತ್ವದ ಹಕ್ಕನ್ನು ಇತರರಿಗೆ ಪರವಾನಗಿ ಮಾಡಬಹುದು. ರೈತ ಸಮುದಾಯಕ್ಕೆ ಒಂದು ತಳಿಯ ಮೇಲೆ ಮಾಲೀಕತ್ವ ಇದ್ದರೆ, ಆ ಸಮುದಾಯದ ಪರಿಮಿತಿಯಲ್ಲಿರುವ ರೈತರು ಅಥವಾ ಪರಿಮಿತಿಯ ಹೊರಗಿನ ರೈತರು ತಳಿಯನ್ನು ಬೆಳೆಯುವುದಾಗಲಿ, ಅದರ ಬೀಜವನ್ನು ಉಪಯೋಗಿಸುವುದಾಗಲಿ, ಹಂಚಿಕೊಳ್ಳುವುದಲ್ಲಾಗಲಿ ಮಾರಾಟ ಮಾಡಲಿಕ್ಕಾಗಲಿ ಯಾವುದೇ ರೀತಿಯ ಅಡ್ಡಿ ಇರುವುದಿಲ್ಲ.

## ತಳಿ ನೋಂದಣಿಯ ಮೂಲಕ ಕಾನೂನು ರೀತ್ಯ ಪಡೆದ ಸಸ್ಯ ತಳಿ ಮಾಲೀಕತ್ವದ ಅವಧಿ:

ಕಾಯಿದೆ ಅನ್ವಯ, ತಳಿ ನೋಂದಣಿ ಮೂಲಕ ಸಸ್ಯ ತಳಿಗಳ ಮೇಲೆ ಪಡೆದ ಮಾಲೀಕತ್ವ ಬಹಳ ಕಡಿಮೆಯ ಅವಧಿಯಾಗಿರುತ್ತದೆ. ಈ ಅವಧಿಯು ಹಬ್ಬು ಬೆಳೆಗಳಾದ ದ್ರಾಕ್ಷಿ, ಮೆಣಸು, ವೀಳ್ಯದ ಎಲೆ ತಳಿಗಳು ಮತ್ತು ಮರ ಜಾತಿಗೆ ಸೇರಿದ ಮಾವು, ಕಿತ್ತಳೆ, ಸೇಬು ಇತ್ಯಾದಿ ಸಸ್ಯ ತಳಿಗಳಿಗೆ 18 ವರ್ಷಗಳ ಅವಧಿಯಾಗಿರುತ್ತದೆ. ವಾರ್ಷಿಕ ಬೆಳೆಗಳಾದ, ಭತ್ತ ಗೋಧಿ, ಕಬ್ಬು, ಆಲೂಗಡ್ಡೆ, ಬಾಳೆ, ರಾಗಿ, ಬದನೆ ಇತ್ಯಾದಿ ಬೆಳೆಗಳಿಗೆ 15 ವರ್ಷಗಳ ಅವಧಿ ಇರುತ್ತದೆ ಮತ್ತು ಹಬ್ಬು ಜಾತಿಯ ತಳಿಗಳಿಗೆ ನೋಂದಣಿಯ ನಂತರ ಪ್ರಾರಂಭದ 9 ವರ್ಷಗಳವರೆಗೆ ಮತ್ತು ಇತರ ಬೆಳೆಗಳ ತಳಿಗಳಿಗೆ ಪ್ರಾರಂಭದ 6 ವರ್ಷಗಳವರೆಗೆ ನೋಂದಣಿ ಅನುದಾನ ಇರುತ್ತದೆ. ಈ ಪ್ರಾರಂಭದ ಅವಧಿ ಮುಗಿದ ನಂತರ ನೋಂದಣಿ ಹೊಂದಿರುವವರು ಒಂದು ನಿಗಧಿತ ನಮೂನೆಯಲ್ಲಿ 15–18 ವರ್ಷಗಳ ಅವಧಿಗೆ ನೋಂದಣಿ ಅನುದಾನ ಪಡೆಯಲು ಅರ್ಜಿ ಸಲ್ಲಿಸಬೇಕು. ನೋಂದಣಿ

ಪಡೆದ ದಿನದಿಂದ, ನಿಗದಿತ ಪೂರ್ಣಾವಧಿ ಮುಗಿದ ನಂತರ ತಳಿಯ ಮೇಲಿನ ಮಾಲೀಕತ್ವ ಅಂತ್ಯವಾಗುವುದು.

ವೃತ್ತಿನಿರತ ಸಸ್ಯ ತಳಿ ವಿಜ್ಞಾನಿಗಳಿಗೆ ಅಥವಾ ಸಂಸ್ಥೆಗಳಿಗೆ ಅನುದಾನ ನೀಡಿದ ಅವಧಿಯ ನೋಂದಣಿ ನವೀಕರಣಕ್ಕೆ ವಾರ್ಷಿಕ ಶುಲ್ಕವನ್ನು ಪಾವತಿ ಮಾಡದಿದ್ದರೆ, ತಳಿಯ ಮೇಲಿನ ಮಾಲೀಕತ್ವ ರದ್ದಾಗುತ್ತದೆ. ಇಂತಹ ವಾರ್ಷಿಕ ನೋಂದಣಿ ನವೀಕರಣ ಶುಲ್ಕ ರೂ. 5000/– ರಿಂದ 10000/– ವರೆಗೆ ಇರುತ್ತದೆ.

## ತಳಿ ನೋಂದಣಿ ಕ್ರಿಯೆ ಮತ್ತು ಇದಕ್ಕೆ ಸಂಬಂಧಿಸಿದ ವಿಷಯಗಳು :

### ತಳಿ ನೋಂದಣಿ ಕ್ರಿಯೆ :

ಇಲ್ಲಿ ತಿಳಿಸಿರುವ ತಳಿ ನೋಂದಣಿ ಕ್ರಿಯೆ ಮತ್ತು ಅದರ ಸಂಬಂಧಿತ ವಿಷಯಗಳು ರೈತರಿಗೆ ಹೆಚ್ಚು ಸಂಬಂಧಿಸಿದ್ದು, ರೈತರ ಬಗ್ಗೆ ಕಾಳಜಿಯಿಂದ ಕೂಡಿರುತ್ತವೆ. ತಳಿ ನೋಂದಣಿಯಲ್ಲಿ ಪ್ರಮುಖವಾಗಿ ಎರಡು ಹಂತಗಳಿರುತ್ತವೆ.

ಮೊದಲನೇ ಹಂತದಲ್ಲಿ ಯಾವುದೇ ಅರ್ಜಿದಾರ ಅಥವಾ ಅರ್ಜಿದಾರ ರೈತರು ನೋಂದಣಿ ಅರ್ಜಿಯನ್ನು ಭರ್ತಿ ಮಾಡಬೇಕು. ಅರ್ಜಿಯನ್ನು ಭರ್ತಿ ಮಾಡುವಾಗ, ಅರ್ಜಿದಾರ ರೈತನ ಹೆಸರು ಮತ್ತು ಇತರ ಮಾಹಿತಿಗಳನ್ನು ಪೂರ್ಣವಾಗಿ ನೀಡಬೇಕಾಗುತ್ತದೆ. ತಳಿ ಅಭಿವೃದ್ಧಿಗೆ ನೀಡಿದ ಕೊಡುಗೆಯ ಆಧಾರದ ಮೇಲೆ ಒಬ್ಬ ರೈತ, ರೈತರ ಗುಂಪು ಅಥವಾ ರೈತ ಸಮುದಾಯ ಅರ್ಜಿದಾರರಾಗಬಹುದು. ಅರ್ಜಿದಾರರು ಗಂಡಾಗಿದ್ದರೆ ಆತ ತನ್ನ ಪತ್ನಿ ಮತ್ತು ಇತರ ಮಾಹಿತಿಯನ್ನು ನೀಡಿ, ತಳಿ ಅಭಿವೃದ್ಧಿಗೆ ಅವರು ಸಹಕರಿಸಿದ ಬಗ್ಗೆ ಮಾಹಿತಿ ನೀಡಬೇಕಾಗುತ್ತದೆ. ರೈತ ಸಮುದಾಯವು ಅರ್ಜಿ ಸಲ್ಲಿಸುತ್ತಿದ್ದರೆ, ಕೆಲವು ರೈತರನ್ನು ಸಮುದಾಯದ ಪರವಾಗಿ ಅಧಿಕೃತ ಸಮುದಾಯ ಪ್ರತಿನಿಧಿಯಾಗಿ ಅರ್ಜಿ ಸಲ್ಲಿಸಲು ಅವಕಾಶ ನೀಡಬಹುದು. ಅರ್ಜಿಯಲ್ಲಿ ಕೇಳಿರುವ ಎಲ್ಲಾ ಮಾಹಿತಿಗಳನ್ನು ಅರ್ಜಿದಾರ ಭರ್ತಿ ಮಾಡಬೇಕಾಗುತ್ತದೆ. ಹಲವು ವಿಷಯಗಳಿಗೆ ನಿಖರ ಮಾಹಿತಿ ಇಲ್ಲದಿದ್ದರೆ, ಅದರಂತೆ ಅರ್ಜಿಯಲ್ಲಿ ಹೇಳಬೇಕಾಗುತ್ತದೆ. ಅರ್ಜಿಯನ್ನು ರೈತ ಅಥವಾ ರೈತ ಸಮುದಾಯ ನಿಗಧಿಪಡಿಸಿದ ಸಸ್ಯ ತಳಿಗಳ ರಿಜಿಸ್ಟ್ರಾರ್ ಕಛೇರಿಗೆ ಸಲ್ಲಿಸುವಾಗ ಯಾವುದೇ ರೀತಿಯ ಶುಲ್ಕ ಪಾವತಿ ಮಾಡಬೇಕಾಗಿಲ್ಲ.

ಎರಡನೇ ಹಂತದಲ್ಲಿ, ಅರ್ಜಿದಾರರು ನೋಂದಣಿ ಮಾಡಿಸಲಿರುವ ತಳಿಯ ಬೀಜವನ್ನು ಸಾಕಷ್ಟು ಪ್ರಮಾಣದಲ್ಲಿ ಪ್ರಾಧಿಕಾರಕ್ಕೆ ನೀಡಬೇಕು. ತಳಿಯ ನೋಂದಣಿಗೆ ಅವಶ್ಯಕವಾದ ವಿಶೇಷ ಗುಣಗಳನ್ನು ಖಚಿತಪಡಿಸಲು ನಡೆಸುವ ಪರೀಕ್ಷೆಗೆ DUS (Distinctness, Univormity and Stability) ಪರೀಕ್ಷೆ ಅನ್ನುತ್ತಾರೆ. ಈ DUS ಪರೀಕ್ಷೆಯನ್ನು, ಮಾಡಲು ತಳಿಯ ನಿಗಧಿತ ಪ್ರಮಾಣದ ಬೀಜ ಅವಶ್ಯಕ. ಇದಕ್ಕಾಗಿ ಸುಮಾರು 250 ಗ್ರಾಂ ಬೀಜವನ್ನು ನ್ಯಾಷನಲ್ ಜಿನ್ ಬ್ಯಾಂಕ್, ದೆಹಲಿ ಇಲ್ಲಿ ಅಥವಾ ಸಸ್ಯ ತಳಿಗಳ ರಿಜಿಸ್ಟ್ರಾರ್ ರವರ ಕಛೇರಿಯಲ್ಲಿ ಠೇವಣಿ ಮಾಡಬೇಕಾಗುತ್ತದೆ. ಈ ಕಛೇರಿಗಳಲ್ಲಿ ಬೀಜ ಠೇವಣಿ ಮಾಡಿದ್ದಕ್ಕೆ ರಸೀದಿಯನ್ನು ಪಡೆಯಬೆಕು. ಪ್ರಾಧಿಕಾರವು ಈ ರಸೀದಿಯನ್ನು ಕೇಳಿದಾಗ ರಸೀದಿಯ ಪ್ರತಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗುತ್ತದೆ.

ರೈತರಿಗೆ ತಳಿ ನೋಂದಣಿ ವಿಷಯದಲ್ಲಿ ಸಹಾಯ ಮತ್ತು ಮಾರ್ಗದರ್ಶನ ನೀಡಲು ಸೇವಾ ಮನೋಭಾವವುಳ್ಳ ವ್ಯಕ್ತಿಗಳ ಹಾಗೂ ಸರ್ಕಾರೇತರ ಸಂಸ್ಥೆಗಳ ಸಹಾಯ ಮತ್ತು ಸಹಕಾರ ಬಹಳ ಮುಖ್ಯವಾಗಿ ಬೇಕಾಗುತ್ತದೆ. ಏಕೆಂದರೆ, ಸಸ್ಯ ತಳಿಗಳ ರಿಜಿಸ್ಟ್ರಾರ್ ಕಛೇರಿಗಳು ಹಳ್ಳಿಗಳಿಂದ ಬಹಳ ದೂರದ ಸ್ಥಳಗಳಲ್ಲಿ ಇರುತ್ತವೆ ಹಾಗೂ ಸಸ್ಯ ತಳಿ ನೋಂದಣಿ ಒಂದು ಕಾನೂನು ಕ್ರಿಯೆಯಾದುದರಿಂದ ನೋಂದಣಿ ಬಯಸುವ ರೈತರಿಗೆ ಕನಿಷ್ಟ ಜ್ಞಾನದ ಅವಶ್ಯಕವಿರುತ್ತದೆ. ತಳಿ ನೋಂದಣಿ ಮಾಡಲು ರೈತರಿಗೆ ಸಹಾಯವಾಗುವಂತೆ ಮೂರನೇ ವ್ಯಕ್ತಿಯನ್ನು ನೇಮಕ ಮಾಡುವುದು

ರೈತನೊಬ್ಬನು ಮುಖ್ಯ ನೋಂದಣಿ ಮಾಡಲು ಇಚ್ಛೆ ಪಟ್ಟಲ್ಲಿ ನೋಂದಣಿ ತಿಳುವಳಿಕೆ ಇರುವ ಯಾವುದೇ ಒಬ್ಬ ವ್ಯಕ್ತಿಯನ್ನು ಅಥವಾ ಸರ್ಕಾರಿಯೇತರ ಸಂಸ್ಥೆಗಳನ್ನು ತಳಿ ನೋಂದಣೀ ಮಾಡಲು ತನ್ನ ಸಹಾಯಕ್ಕಾಗಿ ಗೊತ್ತು ಮಾಡಿಕೊಳ್ಳಬಹುದಾಗಿದೆ. ನೋಂದಣಿ ಕಾರ್ಯವನ್ನು, ಗೊತ್ತು ಮಾಡಿಕೊಂಡ ವ್ಯಕ್ತಿಗೆ ವಹಿಸಬಹುದು. ಇಂತಹ ಸನ್ನಿವೇಶಗಳಲ್ಲಿಯೂ ಸಹ ರೈತನೇ ಕಾನೂನು ರೀತ್ಯ ಸಸ್ಯ ತಳಿ ಮಾಲೀಕತ್ವ ಪಡೆದಿರುತ್ತಾನೆ. ಅರ್ಜಿಯನ್ನು ತಯಾರು ಮಾಡುವುದು, ರಿಜಿಸ್ಟ್ರಾರ್ ಕಛೇರಿಯಲ್ಲಿ ಅರ್ಜಿಯನ್ನು ನಿರೂಪಿಸುವುದು ಹಾಗೂ ಎಲ್ಲಾ ರೀತಿಯ ಕಛೇರಿ ಸಂಬಂಧಿತ ವಿಷಯಗಳನ್ನು ರೈತರ ಪರವಾಗಿ ನಿರ್ವಹಿಸಿ, ತಳಿ ನೋಂದಣಿ ಕಾರ್ಯ ಪೂರ್ತಿ ಮಾಡುವುದು ರೈತ ಗೊತ್ತು ಮಾಡಿಕೊಂಡ ವ್ಯಕ್ತಿಯ ಕೆಲಸವಾಗಿರುತ್ತದೆ. ರೈತನು ಗೊತ್ತು ಮಾಡಿಕೊಂಡ ವ್ಯಕ್ತಿಗೆ ಒಂದು ಅಧೀಕೃತ ಪತ್ರವನ್ನು ನೀಡಬೇಕಾಗುತ್ತದೆ.

ತಮ್ಮ ತಳಿಗೆ ನೋಂದಣಿ ಅನುದಾನ ದೊರೆತ  ನಂತರ, ರೈತರು ತಳಿಯ ಮೇಲಿನ ಮಾಲೀಕತ್ವದ ಹಕ್ಕನ್ನು ಚಲಾಯಿಸಲು ತಾವು ಆಯ್ಕೆ ಮಾಡಿದ ಯಾವುದೇ ಬೇರೆ ವ್ಯಕ್ತಿಗೆ ತಮ್ಮ ಹಕ್ಕುಗಳನ್ನು ವರ್ಗಾವಣೆ ಮಾಡಬಹುದು. ಅಲ್ಲದೇ ಹಕ್ಕುಗಳ ಮೇಲಿನ ಸ್ವಾಮ್ಯತ್ವವನ್ನು ಯಾವುದೇ ಏಜೆಂಟಿಗೆ ಪರವಾನಗಿ ಅಥವಾ ಮಾರಾಟ ಮಾಡಬಹುದು. ಇತರರಿಗೆ ಈ ರೀತಿ ಮಾರಾಟ ಮಾಡಬೇಕಾದಾಗ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿ ಪ್ರಾಧಿಕಾರದ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ. ಈ ಸಂದರ್ಭಗಳಲ್ಲಿ ರೈತರ ಮತ್ತು ಪರವಾನಗಿ ಪಡೆಯುವ ಏಜೆಂಟ್‌ಗಳು ಷರತ್ತುಗಳ ಬಗ್ಗೆ ಕಾನೂನು ರೀತ್ಯ ಒಪ್ಪಂದ ಮಾಡಿಕೊಳ್ಳಬೇಕಾಗುತ್ತದೆ.

## ತಳಿಯ ಬಗ್ಗೆ ನೀಡುವ ಮಾಹಿತಿಯ ಪ್ರಾಮುಖ್ಯತೆ

ತಳಿ ನೋಂದಣಿಗೆ ಸಲ್ಲಿಸುವ ಅರ್ಜಿಯಲ್ಲಿ ತಳಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಅಂದರೆ, ತಳಿಯ ವಿಶೇಷ ಗುಣಗಳು, ಇತರ ತಳಿಯ ಹೋಲಿಕೆಗೆ ಇರುವ ಭಿನ್ನತೆಯ ಗುಣಗಳು, ತಳಿಯ ಭೌಗೋಳಿಕ ಮೂಲ ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿ ನೀಡಬೇಕಾಗುತ್ತದೆ. ಹೆಚ್ಚಿನ ರೈತರಿಗೆ ಈ ರೀತಿ ನಿಖರ ಮಾಹಿತಿಯನ್ನು ಒದಗಿಸಲು ಸಾಧ್ಯವಾಗುವುದಿಲ್ಲ. ಇಂತಹ ಅಸಾಧ್ಯತೆಯಿಂದ, ಕಾಯಿದೆಯ ಅನ್ವಯ, ರೈತರ ಅರ್ಜಿಯ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದು ನಿಧಾನವಾಗಬಹುದು. ಈ ಕಾರಣದಿಂದ ರೈತರು ತಳಿಗಳ ಬಗ್ಗೆ ಅವುಗಳ ಗುಣಗಳ ಬಗ್ಗೆ ಸಾಧ್ಯವಾದಷ್ಟು ಮಾಹಿತಿಯನ್ನು ಒದಗಿಸುವುದು ಸೂಕ್ತ. ತಳಿ ನೋಂದಣಿಯು ಒಂದು ಕಾನೂನು ಕ್ರಿಯೆಯಾದುದರಿಂದ, ಅರ್ಜಿಯಲ್ಲಿ ನೀಡುವ ಮಾಹಿತಿ ಮತ್ತು ಇತರ ಅಂಶಗಳು ಸತ್ಯಕ್ಕೆ ಹತ್ತಿರವಾಗಿರಬೇಕು.

ಈ ಮೇಲೆ ತಿಳಿಸಿದ ಎಲ್ಲಾ ಅಂಶಗಳನ್ನು ಮನಗಂಡು, ರೈತರಿಗೆ ತಳಿ ನೋಂದಣಿ ವಿಷಯದಲ್ಲಿ ಸಹಾಯ ಮಾಡಲು ಸ್ವಸೇವಾ ಸಂಘ ಸಂಸ್ಥೆಗಳು ಅಥವಾ ಸರ್ಕಾರೇತರ ಸಂಸ್ಥೆಗಳು ಮುಂದೆ ಬಂದು, ರೈತರಿಗೆ ತಳಿ ನೋಂದಣಿ ಬಗ್ಗೆ ಹಾಗೂ ರೈತರು ಅರ್ಜಿ ಸಲ್ಲಿಸುವಾಗ ನೀಡಬೇಕಾದ ಮಾಹಿತಿಯ ಬಗ್ಗೆ ತಿಳುವಳಿಕೆ ಮೂಡಿಸುವುದು ಮತ್ತು ಸಹಾಯ ಮಾಡುವುದು ಬಹಳ ಅವಶ್ಯಕವಾಗಿರುತ್ತದೆ.

## ನೋಂದಣಿಸಿದ ತಳಿಯ ಉತ್ತಮ ಬಿತ್ತನೆ ಬೀಜ ರೈತರಿಗೆ ದೊರೆಯುವಂತೆ ಮಾಡುವ ಜವಾಬ್ದಾರಿ

ತಳಿ ನೋಂದಣಿಯ ಮೂಲಕ ಸಸ್ಯ ತಳಿಗಳ ಮೇಲೆ ಮಾಲೀಕತ್ವ ಪಡೆಯುವವರು, ಆ ತಳಿಯ ಬಿತ್ತನೆ ಬೀಜವನ್ನು ಉತ್ಪಾದಿಸಿ, ಬೀಜದ ಬೇಡಿಕೆಯನ್ನು ನೀಗಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಒಂದು ಜವಾಬ್ದಾರಿಯುತ ಕೆಲಸವಾಗಿರುತ್ತದೆ. ಆದ್ದರಿಂದ, ತಳಿ ನೋಂದಣಿ ಅವಧಿಯಲ್ಲಿ ತಳಿಯ ಬೀಜದ ಉತ್ತಮ ಗುಣಗಳನ್ನು ಕಾಯ್ದುಕೊಳ್ಳುವುದು ತದನಂತರ, ಬಿತ್ತನೆ ಬೀಜಕ್ಕೆ ಉಂಟಾಗುವ ರೈತರ ಬೇಡಿಕೆಯನ್ನು ಈಡೇರಿಸಲು ಉತ್ತಮ ಗುಣಮಟ್ಟದ ಬೀಜೋತ್ಪಾದನೆ ಮಾಡುವುದು ಬಹಳ ಮುಖ್ಯವಾಗಿರುತ್ತದೆ.

## ಸಾಂಪ್ರದಾಯಿಕ ತಳಿಗಳ ಮಾಲೀಕತ್ವದ ವಿಷಯದಲ್ಲಿ ಸಂಭವಿಸಬಹುದಾದ ವಿವಾದಗಳು ಅಥವಾ ಗೊಂದಲಗಳು

ಎಲ್ಲಾ ಸಾಂಪ್ರದಾಯಿಕ ರೈತರ ತಳಿಗಳನ್ನು ಒಂದು ಅಥವಾ ಮತ್ತೊಂದು ಪ್ರಾಂತ್ರ್ಯಗಳಲ್ಲಿ ರೈತರು ಮುಕ್ತವಾಗಿ ಬೆಳೆಯುತ್ತಿರುತ್ತಾರೆ. ಇಂತಹ ತಳಿಗಳ ಬೇಸಾಯ, ಹರಡುವಿಕೆ, ತಳಿ ವಿಸ್ತೀರ್ಣವು ಆಯಾ ತಳಿಗಳ ಹೊಂದಾಣಿಕೆ ಮತ್ತು ಉತ್ತಮ ಗುಣಗಳ ಆಧಾರದ ಮೇಲೆ ಅವಲಂಬಿತವಾಗಿರುತ್ತದೆ. ಈ ಸಾಂಪ್ರದಾಯಿಕ ತಳಿಗಳ ಬೀಜಗಳ ಉಳಿಸುವಿಕೆ, ಹಂಚಿಕೆ ಮತ್ತು ಬೀಜ ಬದಲಾವಣೆಗಳ ಮೇಲೆ ಒಂದು ಮುಕ್ತ ಹಿನ್ನೆಲೆ ಇರುವುದರಿಂದ ಬಹಳಷ್ಟು ರೈತರಿಗೆ, ಇಂತಹ ತಳಿಗಳ ಮೂಲದ ಬಗ್ಗೆ ನಿಖರ ಮಾಹಿತಿ ಇರುವುದಿಲ್ಲ.

ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯಿದೆಯಲ್ಲಿ ತಳಿ ನೋಂದಣಿಗೆ ರೈತರಿಗೆ ಅವಕಾಶ ಮಾಡಿಕೊಟ್ಟಿರುವ ಹಿನ್ನೆಲೆಯಲ್ಲಿ ಸಾಂಪ್ರದಾಯಿಕ ತಳಿಗಳ ಅಭಿವೃದ್ಧಿ ಮತ್ತು ಸಂರಕ್ಷಣೆ ಕಾರ್ಯಗಳ ಬಗ್ಗೆ ಹಕ್ಕು ಬಾಧ್ಯತೆಗಳನ್ನು ಪ್ರತಿಪಾದಿಸಲು ಪ್ರಯತ್ನಿಸುವ ವಿಷಯಗಳಲ್ಲಿ ರೈತರಲ್ಲಿ ಅಥವಾ ರೈತ ಸಮುದಾಯಗಳಲ್ಲಿ ತಿಕ್ಕಾಟವಾಗುವ ಸಂಭವವಿರುತ್ತದೆ. ವಿವಿಧ ಪ್ರಾಂತ್ಯಗಳಲ್ಲಿ ಅಥವಾ ವಲಯಗಳಲ್ಲಿ ಒಂದೇ ತಳಿಯನ್ನು ರೈತರು ಬೆಳೆಯುತ್ತಿದ್ದು ಏಕಕಾಲದಲ್ಲಿ ಅರ್ಜಿ ಸಲ್ಲಿಸಬಹುದು. ತಳಿಗಳು ಬಹಳ ದೀರ್ಘಕಾಲ ಬೇಸಾಯದಲ್ಲಿದ್ದರೆ ಅಥವಾ ಹೆಚ್ಚು ಪ್ರದೇಶಗಳಲ್ಲಿ ಹರಡಿದ್ದರೆ. ಅಂತಹ ತಳಿಗಳ ಮೇಲೆ ಮಾಡುವ ಹಕ್ಕು

ಬಾಧ್ಯತೆಗಳು ಹೆಚ್ಚಾಗಬಹುದು. ರೈತರ ತಳಿಗಳನ್ನು ನೋಂದಣಿ ಮಾಡಿಸುವ ಪ್ರಯತ್ನದಲ್ಲಿ ತಲೆದೋರುವ ವಿವಾದ ಮತ್ತು ಸಮಸ್ಯಾತ್ಮಕ ಸನ್ನಿವೇಶಗಳು ಈ ರೀತಿ ಇವೆ.

1. ಹಲವು ರೈತರ ತಳಿಗಳು ಬಹಳ ಕಾಲ ಬೇಸಾಯದಲ್ಲಿದ್ದಾಗ, ಇಂತಹ ತಳಿಗಳ ಮೂಲ ಅಭಿವೃದ್ಧಿಗೆ ಕಾರಣಕರ್ತರಾದ ರೈತರ ಬಗ್ಗೆ ಮಾಹಿತಿ ಇರುವುದಿಲ್ಲ. ಈ ರೀತಿಯ ಪ್ರಕರಣಗಳಲ್ಲಿ ಯಾವ ರೈತ ಅಥವಾ ರೈತ ಸಮುದಾಯ ಪ್ರಸ್ತುತ ತಳಿಯ ಸಂರಕ್ಷಣೆ ಮಾಡುತ್ತಿರುವರೋ ಅಂತಹವರೇ, ಆ ತಳಿಯ ಮೇಲೆ ಮಾಲೀಕತ್ವ ಪಡೆಯಲು ನಿರ್ವಿವಾದ ಹಕ್ಕು ಬಾಧ್ಯರಾಗಿರುತ್ತಾರೆ.

2. ಮತ್ತೊಂದು ಪ್ರಕರಣದಲ್ಲಿ, ಒಂದು ಪುರಾತನ ಜನಪ್ರಿಯ ತಳಿ ಬಹಳಷ್ಟು ಪ್ರದೇಶದಲ್ಲಿ ಹರಡಿದ್ದು, ಹಲವಾರು ಗ್ರಾಮಗಳಲ್ಲಿ, ಜಿಲ್ಲೆಗಳಲ್ಲಿ, ರಾಜ್ಯಗಳಲ್ಲಿ ಆ ತಳಿಯನ್ನು ಬೆಳೆಯಲಾಗುತ್ತಿರುವುದಕ್ಕೆ ಚಾರಿತ್ರಿಕ ಪುರಾವೆಗಳಿರುತ್ತವೆ. ಒಂದೇ ತಳಿಯು ವಿವಿಧ ಭಾಗಗಳಲ್ಲಿ ಬೇರೆ ಬೇರೆ ಹೆಸರಿನಿಂದ ಕರೆಯಲ್ಪಟ್ಟು, ತಳಿ ಗುಣಗಳಲ್ಲಿ ಮಾತ್ರ ಒಂದೇ ಆಗಿರುತ್ತದೆ. ಇಂತಹ ಸಂದರ್ಭದಲ್ಲಿ, ರೈತ ಸಮುದಾಯವು ತಳಿಯ ಬಗ್ಗೆ ನೀಡುವ ಚಾರಿತ್ರಿಕ ಪುರಾವೆಗಳ ಆಧಾರದ ಮೇಲೆ ತಳಿ ನೋಂದಣಿಗೆ ಅರ್ಹತೆ ಪಡೆಯುವವರನ್ನು ನಿರ್ಧರಿಸಲಾಗುವುದು.

3. ಇನ್ನೊಂದು ಸನ್ನಿವೇಶದಲ್ಲಿ ಒಂದು ಸಾಂಪ್ರದಾಯಿಕ ತಳಿಯು ಒಂದು ರೈತ ಸಮುದಾಯದಿಂದ ಅಭಿವೃದ್ಧಿ ಹೊಂದಿ, ನಂತರ ಇತರ ಬೇರೆ ಬೇರೆ ಸ್ಥಳಗಳಿಗೆ ಹರಡಿರುತ್ತದೆ. ಈ ಸ್ಥಳಗಳಲ್ಲಿರುವ ಹವಾಮಾನ ಮತ್ತು ಬೆಳೆ ಉತ್ಪಾದನೆಗೆ ಅನುಸರಿಸುವ ಬೇಸಾಯ ಕ್ರಮಗಳ ವೈವಿದ್ಯತೆಯಿಂದ, ಮೂಲ ತಳಿಯಲ್ಲಿ ಸ್ವಲ್ಪ ಬದಲಾವಣೆ ಉಂಟಾಗಿ ಮತ್ತು ಆ ತಳಿಗಳಲ್ಲಿ ಮಾಡುವ ಆಯ್ಕೆಯಿಂದ ಹಲವು ಬಗೆಯ ತಳಿಗಳು ಉತ್ಪತ್ತಿಯಾಗುತ್ತವೆ. ಹೊಸದಾಗಿ ಮಾರ್ಪಾಟಾದ ಎಲ್ಲಾ ತಳಿಗಳ ಹೆಸರು ಮಾತ್ರ ಒಂದೇ ಆಗಿರುತ್ತದೆ. ಇಂತಹ ಸನ್ನಿವೇಶದಲ್ಲಿ ಮೂಲ ತಳಿಯ ಮತ್ತು ಮೂಲ ತಳಿಯಿಂದ ಉತ್ಪತ್ತಿಯಾದ ಬೇರೆ ಬೇರೆ ತಳಿಗಳನ್ನು ಸಂಬಂಧಪಟ್ಟ ರೈತ ಸಮುದಾಯ ಬೇರೆ ಬೇರೆಯಾಗಿ ನೋಂದಣಿ ಮಾಡಿಸಲು ಅವಕಾಶವಿರುತ್ತದೆ.

## ನೋಂದಣಿಸಿದ ತಳಿಯ ಪರಿಶುದ್ಧತೆಯನ್ನು ಕಾಯ್ದುಕೊಳ್ಳುವಿಕೆ

ಒಂದು ತಳಿಯ ಮೇಲೆ ನೋಂದಣಿಯ ಅನುದಾನ ದೊರೆತಿದೆ ಅಂದರೆ, ಆ ತಳಿಯ ಭಿನ್ನತೆ, ಏಕರೂಪತೆ ಮತ್ತು ಸ್ಥಿರತೆಯ ಗುಣಗಳ ಮೇಲೆ ಅಧಿಕೃತ ಒಪ್ಪಿಗೆ ದೊರೆತಿದೆ ಎಂದರ್ಥ, ನೋಂದಣಿತ ತಳಿಯ ಬೀಜೋತ್ಪಾದನೆ ಮಾಡುವಾಗ ಈ ವಿಶಿಷ್ಟ ಗುಣಳನ್ನು ತಳಿಯಲ್ಲಿ ಕಾಯ್ದುಕೊಳ್ಳುವುದು ತಳಿಯ ನೋಂದಣಿಯುನ್ನು ಉಳಿಸಿಕೊಳ್ಳಲು ಅವಶ್ಯಕವಾಗಿರುತ್ತದೆ. ಕಳಪೆ ತಳಿ ನಿರ್ವಹಣಾ ಕ್ರಮಗಳಿಂದ ತಳಿಯ ಪರಿಶುದ್ಧತೆ ಮತ್ತು ಭಿನ್ನತೆಯ ಗುಣಗಳನ್ನು ಕಾಯ್ದುಕೊಳ್ಳದಿದ್ದರೆ, ತಳಿಯ ಮೇಲೆ ದೊರೆತಿರುವ ನೋಂದಣಿಯ ಅನುದಾನ ರದ್ದಾಗಬಹುದು. ಆದ್ದರಿಂದ ತಳಿಯ ಉತ್ತಮ ಬೀಜವನ್ನು ಕಾಯ್ದುಕೊಳ್ಳುವುದು ಮತ್ತು ತಳಿಯ ಅನುವಂಶಿಕ ಗುಣಗಳ ಪರಿಶುದ್ಧತೆಯನ್ನು ಕಾಪಾಡುವುದು ತಳಿಯ ಮಾಲೀಕತ್ವ ಪಡೆದವರ ಜವಾಬ್ದಾರಿಯಾಗಿರುತ್ತದೆ.

## ರೈತರ ತಳಿಗಳನ್ನು ವಾಣಿಜ್ಯಕರಣಗೊಳಿಸುವುದು

ಒಂದು ತಳಿಯ ಮೇಲೆ ಮಾಲೀಕತ್ವ ಪಡೆದವರಿಗೆ, ತಳಿಯ ಬಗೆಗಿನ ಹಕ್ಕು ಮತ್ತು ಜವಾಬ್ದಾರಿಯನ್ನು ಎರಡು ವಿಧಾನಗಳಲ್ಲಿ ಮನವರಿಕೆ ಮಾಡಿಕೊಡಲಾಗಿದೆ. ಅವೆಂದರೆ;

1. ತಳಿಯ ಬಿತ್ತನೆ ಬೀಜವನ್ನು ಉತ್ಪಾದಿಸುವ ಮತ್ತು ಮಾರಾಟ ಮಾಡುವ ಸಂಪೂರ್ಣ ಹಕ್ಕು ತಳಿ ನೋಂದಣಿ ಮಾಡಿದ ತಳಿ ಮಾಲೀಕನಿಗೆ ದೊರೆಯುತ್ತದೆ.

2. ಇದರ ಜೊತೆಗೆ ಸಾರ್ವಜನಿಕರಿಂದ ಅಥವಾ ರೈತರಿಂದ ತಳಿಯ ಬಿತ್ತನೆ ಬೀಜಕ್ಕೆ ಇರುವ ಬೇಡಿಕೆಯನ್ನು ಈಡೇರಿಸುವುದಲ್ಲದೆ, ತಳಿಯ ಬಿತ್ತನೆ ಬೀಜವು ರೈತರಿಗೆ ನ್ಯಾಯಯುತ ಸಾಧಾರಣ ಬೆಲೆಯಲ್ಲಿ ದೊರಕುವಂತೆ ನೋಡಿಕೊಳ್ಳುವ ಜವಾಬ್ದಾರಿ ಸಹ ತಳಿ ಮಾಲೀಕತ್ವ ಪಡೆದವನ ಮೇಲಿರುತ್ತದೆ. ಅಂದರೆ, ಹಕ್ಕು ಮತ್ತು ಜವಾಬ್ದಾರಿ ಪರಸ್ಪರ ಜೊತೆಯಲ್ಲೇ ಸಾಗುತ್ತವೆ. ರೈತ ಅಥವಾ ಒಂದು ರೈತ ಸಮುದಾಯ ತಳಿಯ ಗುಣಮಟ್ಟದ ವ್ಯವಸ್ಥಿತ ಬೀಜೋತ್ಪಾದನೆಯನ್ನು ಸ್ವತಃ ತಾವೇ ಅಥವಾ ಇತರರಿಗೆ ಪರವಾನಗಿ ನೀಡುವುದರ ಮೂಲಕ ನೋಡಿಕೊಳ್ಳಬೇಕು. ಬಿತ್ತನೆ ಬೀಜಕ್ಕೆ ಇರುವ ಬೇಡಿಕೆಯನ್ನು ಈಡೇರಿಸದಿದ್ದ ಬಗ್ಗೆ ರೈತರಿಂದ ಫಿರ್ಯಾದು ಬಂದರೆ, ಆಗ

ಬೀಜೋತ್ಪಾದನೆ ಮತ್ತು ಮಾರಾಟದ ಹಕ್ಕನ್ನು ಇತರರಿಗೆ ಕಡ್ಡಾಯ ಪರವಾನಗಿ ಮೂಲಕ ಒಪ್ಪಿಸಲಾಗುತ್ತದೆ. ಪರಸ್ಪರ ಒಪ್ಪಂದ ಮತ್ತು ಷರತ್ತುಗಳ ಆಧಾರದ ಮೇಲೆ ಕಡ್ಡಾಯ ಪರವಾನಗಿಯನ್ನು ನೀಡಬಹುದು.

ಎಲ್ಲಿಯವರೆಗೆ ತಳಿಯ ಮಾಲೀಕತ್ವವನ್ನು ರೈತರು ಹೊಂದಿರುತ್ತಾರೋ, ಅಲ್ಲಿಯವರೆಗೆ ಇತರರಿಂದ ತಳಿಯ ಅನಧೀಕೃತ ಬೀಜೋತ್ಪಾದನೆ ಮತ್ತು ಮಾರಾಟ ಮಾಡುವುದನ್ನು ಪತ್ತೆ ಹಚ್ಚುವ ಜವಾಬ್ದಾರಿಯು ರೈತರದ್ದೇ ಆಗಿರುತ್ತದೆ. ಯಾವುದೇ ಅನಧೀಕೃತ ಚಟುವಟಿಕೆಗಳಲ್ಲಿ ಪಾಲ್ಗೊಂಡು, ಕಾಯಿದೆಯ ಉಲ್ಲಂಘನೆ ಮಾಡುವವರ ವಿರುದ್ಧ ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ನ್ಯಾಯ ಮಂಡಳಿಗೆ ಅಥವಾ ಬೌದ್ಧಿಕ ಆಸ್ತಿ ಸಂಬಂಧಿತ ಮನವಿ ಮಂಡಳಿಗೆ ದೂರು ಸಲ್ಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಮನವಿ ಮಾಡಬಹುದು.

## ರೈತರ ತಳಿಗಳನ್ನು ಕಡ್ಡಾಯ ಪರವಾನಗಿ ಮಾಡುವಾಗ ಗಮನಿಸಬೇಕಾದ ಮುಖ್ಯ ಅಂಶಗಳು

ಪರವಾನಗಿ ಎಂದರೆ ತಳಿ ಮಾಲೀಕತ್ವ ಪಡೆದಿರುವವನು ಒಬ್ಬ ವ್ಯಕ್ತಿಗೆ, ಹೆಚ್ಚು ವ್ಯಕ್ತಿಗಳಿಗೆ ಅಥವಾ ಯಾವುದೇ ಸಂಸ್ಥೆಗೆ ತಳಿ ಮಾಲೀಕತ್ವಕ್ಕೆ ಸಂಬಂಧಪಟ್ಟ ಸಂಪೂರ್ಣ ಹಕ್ಕನ್ನು ಕಾನೂನು ರೀತ್ಯ ಪರಸ್ಪರ ಒಪ್ಪಂದಗಳ ಮೂಲಕ ಪಾವತಿ ಮಾಡಬೇಕಾದ ಮೊತ್ತ, ಪರವಾನಗಿ ನೀಡುವ ಅವಧಿ, ಸಂಪೂರ್ಣ ಅಥವಾ ಅಸಂಪೂರ್ಣ ಪರವಾನಗಿಯೇ, ಯಾವ ಯಾವ ವಿಷಯಗಳಲ್ಲಿ ಪರವಾನಗಿ ನೀಡಲಾಗಿದೆ, ಯಾವ ಯಾವ ವಿಷಯಗಳು ಮೂಲ ತಳಿ ಮಾಲೀಕತ್ವ ಹೊಂದಿದವರಲ್ಲೇ ಇರುತ್ತವೆ ಇತ್ಯಾದಿ ಅಂಶಗಳಿರುತ್ತವೆ. ಪರವಾನಗಿ ಮಾಡುವ ಸಂರ್ಭದಲ್ಲಿ ಕಾನೂನು ತಜ್ಞರ ಸಲಹೆ ಪಡೆದು ಅವರ ಸಮ್ಮುಖದಲ್ಲಿ ಕಾನೂನು ರೀತ್ಯ ಪರವಾನಿಗೆ ಒಪ್ಪಂದವನ್ನು ತಯಾರು ಮಾಡಿ ಸಹಿ ಮಾಡುವುದು ಸೂಕ್ತ.

ಒಂದು ತಳಿಯನ್ನು ಪರವಾನಿಗೆ ಮಾಡುವಾಗ ರೈತ ಸಮುದಾಯ ಕೆಳಗೆ ತಿಳಿಸಿದ ವಿಷಯಗಳ ಬಗ್ಗೆ ಜಾಗರೂಕರಾಗಿರಬೇಕಾಗುತ್ತದೆ.

1. ಪರವಾನಗಿ ಮಾಡುವಾಗ, ಷರತ್ತುಗಳ ಬಗ್ಗೆ ವ್ಯವಹರಿಸುವಾಗ, ಕರಡನ್ನು ತಯಾರಿಸುವಾಗ ರೈತ ಸಮುದಾಯ ಅಥವಾ ಅದರ ಕೆಲವು ಪ್ರತಿನಿಧಿಗಳನ್ನು ಕಾನೂನಿನ ರೀತ್ಯ ಒಳಪಡಿಸುವುದು ಸೂಕ್ತ.

2. ಪರವಾನಗಿಯ ಷರತ್ತುಗಳನ್ನು ಮಂಡಿಸುವಾಗ, ಈ ಕೆಳಗೆ ತಿಳಿಸಿದ ವಿಷಯಗಳ ಬಗ್ಗೆ ಸರಿಯಾದ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ.

1) ಪಾವತಿಸಬೇಕಾದ ಪರವಾನಗಿ ಶುಲ್ಕದ ಮೊತ್ತ, ಪಾವತಿಯ ವಿವರ ಮತ್ತು ವಿಧಾನಗಳು.

2) ತಳಿ ಮಾಲೀಕತ್ವದ ಹಕ್ಕನ್ನು ಚಲಾಯಿಸುವ ಭೌಗೋಳಿಕ ಪರಿಮಿತಿಯ ನಿರ್ಧರಿಸುವಿಕೆ.

3) ಯಾವ ವಿಷಯಗಳಲ್ಲಿ ಸಂಪೂರ್ಣ ಹಕ್ಕುಗಳ ಪರವಾನಗಿ ಮಾಡಲಾಗಿದೆ.

4) ಪರವಾನಗಿ ಪಡೆದವನು ತಳಿಯ ಬಿತ್ತನೆ ಬೀಜದ ನಿಗಧಿಪಡಸಿದ ಗುಣಮಟ್ಟಗಳನ್ನು ಕಾಯ್ದುಕೊಳ್ಳುವ ಬಗ್ಗೆ.

5) ಬೀಜ ಮಾರಾಟದ ಸಂಬಂಧಿತ ಬೇಡಿಕೆಗಳನ್ನು ಕಾಯ್ದುಕೊಳ್ಳುವ ಬಗ್ಗೆ

6) ಉಪ ಪರವಾನಗಿ ವಿಷಯಗಳ ಬಗ್ಗೆ

7) ತಳಿ ಮಾಲೀಕತ್ವ ಹಕ್ಕುಗಳ ಉಲ್ಲಂಘನೆಯಾದಾಗ ಅದರ ಮೇಲ್ವಿಚಾರಣೆ ಮಾಡುವ ವಿಷಯ ಹಾಗೂ ಉಲ್ಲಂಘನೆಯ ಮೂಲಕ ಮಾಡಿದ ಅಪರಾಧಕ್ಕೆ ಕಾನೂನು ರೀತ್ಯ ಕ್ರಮ ಒದಗಿಸುವ ವಿಷಯಗಳು ಇತ್ಯಾದಿ.

## ನೋಂದಣಿ ಶುಲ್ಕ

ಸಸ್ಯ ತಳಿಗಳನ್ನು ನೋಂದಣಿ ಮಾಡುವ ಸಮಯದಲ್ಲಿ ಪ್ರಾಧಿಕಾರವು ಸೂಚಿಸಿರುವ ಶುಲ್ಕದ ದರವನ್ನು ಕೆಳಗಿನ ಕೋಷ್ಠಕದಲ್ಲಿರುವಂತೆ ನಿಗದಿಪಡಿಸಲಾಗಿದೆ.

ನೋಂದಣಿ ಕಾಲಾವಧಿ ಮುಗಿದ ನಂತರ, ಸಸ್ಯ ತಳಿಯ ಮೇಲಿನ ಮಾಲೀಕತ್ವ ಅಂತ್ಯಗೊಳ್ಳುತ್ತದೆ. ಹಾಗೂ ತಳಿಯು ಸಾರ್ವಜನೀಕ ಸ್ವತ್ತಾಗಿ ಪರಿವರ್ತನೆ ಆಗುತ್ತದೆ. ನಿಗದಿತ ಕಾಲಾವಧಿಯಲ್ಲಿ ವಾರ್ಷಿಕ ನೋಂದಣಿ ನವೀಕರಣ ಶುಲ್ಕವನ್ನು ಪ್ರಾಧಿಕಾರಕ್ಕೆ ಪಾವತಿಸುವುದು ಕಡ್ಡಾಯವಾಗಿರುತ್ತದೆ.

## ಸಸ್ಯತಳಿ ನೋಂದಣಿಯ ಶುಲ್ಕದ ವಿವರ.

| ಕ್ರ.ಸಂ | ತಳಿಯ ವಿಧ | ಶುಲ್ಕದ ದರ |
|---|---|---|
| 01 | ಬೀಜ ಕಾಯ್ದೆ 1966 ಪರಿಚ್ಛೇದ 5 ರ ಅನ್ವಯ ಅಧಿಸೂಚಿಸಿದ ಚಾಲ್ತಿಯಲ್ಲಿರುವ ತಳಿಗಳು | ರೂ.1000/– |
| 02 | ಹೊಸ ತಳಿಗಳು | ವೈಯಕ್ತಿಕ ರೂ. 5000/–<br>ಶೈಕ್ಷಣಿಕ ರೂ. 7000/–<br>ವಾಣಿಜ್ಯ ರೂ. 10000/– |
| 03 | ಚಾಲ್ತಿಯಲ್ಲಿರುವ ತಳಿಗಳು, ಅಥವಾ ತಳಿಯ ಬಗ್ಗೆ ಜನರಿಗೆ ಸಾಮಾನ್ಯ ಜ್ಞಾನವಿರುವ ತಳಿಗಳು | ವೈಯಕ್ತಿಕ ರೂ. 7000/–<br>ಶೈಕ್ಷಣಿಕ ರೂ. 3000/–<br>ವಾಣಿಜ್ಯ ರೂ. 5000/– |

### ಡಸ್ ಪರೀಕ್ಷಾ ಕೇಂದ್ರಗಳು :

ತಳಿಯ ನೋಂದಣಿಗೆ ಅವಶ್ಯಕವಾದ ವಿಶೇಷ ಗುಣಗಳನ್ನು ಖಚಿತ ಪಡಿಸಲು ನಡೆಸುವ ಪರೀಕ್ಷೆಗೆ ಡಸ್ ಎನ್ನುತ್ತಾರೆ. ಪ್ರಾಧಿಕಾರವು ದೇಶದ್ಯಾಂತ 52 ಡಸ್ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಿದೆ. ಈ ಕೇಂದ್ರಗಳಿಗೆ ವಿವಿಧ ಬೆಳೆಗಳ ತಳಿಗಳ ವಿಭಿನ್ನತೆ, ಏಕರೂಪತೆ ಹಾಗೂ ಧೃಢತೆಯ ಪರೀಕ್ಷೆಗಳನ್ನು ಮಾಡುವ ಜವಾಬ್ದಾರಿಯನ್ನು ವಹಿಸಲಾಗುತ್ತಿದೆ.

### ಪ್ರಾಧಿಕಾರದ ಪ್ರಕಟಣೆಗಳು:

1. ಪ್ಲಾಂಟ್ ವೆರೈಟಿ ಜನರಲ್ ಆಪ್ ಇಂಡಿಯಾ–ತ್ರೈಮಾಸಿಕ ಆಂಗ್ಲ ಮತ್ತು ಹಿಂದಿ ಭಾಷೆಯಲ್ಲಿ ಇದನ್ನು ಪ್ರಕಟಿಸಲಾಗುತ್ತಿದೆ.

2. ತಳಿ ನೋಂದಣಿಗೆ ಅವಶ್ಯಕವಾದ ತಳಿಯ ವಿಶೇಷ ಗುಣಗಳನ್ನು ನಿರ್ಧರಿಸುವ ಮಾರ್ಗಸೂಚಿಯನ್ನು ಒಳಗೊಂಡ ವಿವಿಧ ಬೆಳೆಗಳ ಪ್ರಕಟಣೆಗಳು.

3. ರೈತರ ಹಕ್ಕುಗಳನ್ನೊಳಗೊಂಡ ಕೈಪಿಡಿಗಳ ಮತ್ತು ಪ್ರಕಟಣೆಗಳ ಮುದ್ರಣ.

## ಕಾಯಿದೆಯ ಅನುಷ್ಠಾನ ನಿಟ್ಟಿನಲ್ಲಿ ಆಗಿರುವ ವಿದ್ಯಮಾನಗಳು

1. ಕಾಯಿದೆಯ ಪೂರ್ಣ ವಿವರಗಳನ್ನು ಭಾರತ ಸರ್ಕಾರವು ಕೇಂದ್ರ ಸರ್ಕಾರದ ಗೆಜೆಟ್‌ನಲ್ಲಿ ಅಧಿಕೃತವಾಗಿ ಪ್ರಕಟಣೆ ಮಾಡಿದೆ.

2. ಅಕ್ಟೋಬರ್ 2005ರಲ್ಲಿ, ಭಾರತ ಸರ್ಕಾರವು ಹೊಸ ಕಾಯಿದೆಯನ್ನು ದೇಶದಾದ್ಯಂತ ಅನುಷ್ಠಾನಗೊಳಿಸುವುದಕ್ಕಾಗಿ ಸಸ್ಯ ತಳಿ ಮತ್ತು ರೈತರ ಹಕ್ಕುಗಳ ರಕ್ಷಣೆ ಪ್ರಾಧಿಕಾರವನ್ನು ನವದೇಹಲಿಯಲ್ಲಿ ಸ್ಥಾಪಿಸಿದೆ. ಪ್ರಾಧಿಕಾರದ ಪ್ರಸ್ತುತ ಅಧ್ಯಕ್ಷರಾಗಿ, ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಹಾಗೂ ಅಂತರಾಷ್ಟ್ರೀಯ ಖ್ಯಾತ ಗೋಧಿ ತಳಿ ವಿಜ್ಞಾನಿಗಳಾದ ಡಾ॥ ಆರ್.ಆರ್. ಹಂಚಿನಾಳ್‌ರವರು ಕಾರ್ಯನಿರ್ವಹಿಸುತ್ತಿದ್ದಾರೆ.

3. ನಮ್ಮ ದೇಶದಲ್ಲಿ ಲಭ್ಯವಿರುವ ಎಲ್ಲಾ ಬೆಳೆಗಳ ತಳಿಗಳನ್ನು ಡಿಯುಎಸ್ (ತಳಿ ನೋಂದಣಿಗೆ ಅವಶ್ಯಕವಾದ ಪರೀಕ್ಷೆ) ಪರೀಕ್ಷೆಗೆ ಒಳಪಡಿಸಿ, ಅವುಗಳ ಗುಣವಿಶೇಷಗಳನ್ನು ದಾಖಲು ಮಾಡಲು ಕಾರ್ಯಕ್ರಮ ಕೈಗೊಂಡು ಈಗಾಗಲೇ 58 ಬೆಳೆಗಳಲ್ಲಿ ಡಿಯುಎಸ್ ಪರೀಕ್ಷೆಗೆ ಅವಶ್ಯಕವಾದ ಮಾರ್ಗಸೂಚಿ ಲಭ್ಯವಾಗಿ, ಈ ಬೆಳೆ ತಳಿಗಳ ನೊಂದಣಿ ಕಾರ್ಯಗತದಲ್ಲಿದೆ.

4. ಕಾಯಿದೆಯ ಅನ್ವಯ, ನೋಂದಣಿಸುವ ಬೆಳೆಗಳಿಗೆ ಪಾವತಿ ಮಾಡಬೇಕಾದ ನೋಂದಣಿ ಶುಲ್ಕವನ್ನು ಹಾಗೂ ಡಿಯುಎಸ್ ಪರೀಕ್ಷೆಗೆ ಅವಶ್ಯಕವಾದ ಶುಲ್ಕಗಳನ್ನು ನಿಗದಿಪಡಿಸಲಾಗಿದೆ.

5. ಪ್ರಾಧಿಕಾರದ ಅಧ್ಯಕ್ಷರು ಈಗಾಗಲೇ ರಾಷ್ಟ್ರಾದ್ಯಂತ ಕಾಯಿದೆಯುನ್ನು ಅನುಷ್ಠಾನಗೊಳಿಸಲು ಕೃಷಿ ವಿಶ್ವವಿದ್ಯಾಲಗಳು ಮತ್ತು ರಾಜ್ಯ ಸರ್ಕಾರಗಳ ನೆರವಿನೊಂದಿಗೆ, ಕಾಯಿದೆ ಅನುಷ್ಠಾನದ ಮಾರ್ಗಸೂಚಿ ಮತ್ತು ಇತರ ವಿಧಾನಗಳ ರೂಪುರೇಷೆಗಳನ್ನು ತಯಾರುಮಾಡಲು ಪ್ರಯತ್ನ ನಡೆಸಿದ್ದಾರೆ.

6. ಪ್ರಾಧಿಕಾರವು Plant Variety Journal of India ಎಂಬ ತ್ರೈಮಾಸಿಕ ಜರ್ನಲ್ ಅನ್ನು ಪ್ರಕಟ ಮಾಡುತ್ತಿದೆ. ಈ ಜರ್ನಲ್ ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯಿದೆಯ ಅಧಿಕೃತ ಗೆಜೆಟ್ ಮಾದರಿಯಲ್ಲಿ ಇದ್ದು, ಈ ಜರ್ನಲ್‌ನಲ್ಲಿ ನೋಂದಣಿತ ತಳಿಗಳ ಬಗ್ಗೆ ಹಾಗೂ ಕಾಯಿದೆಗೆ ಸಂಬಂಧಪಟ್ಟಂತೆ ಆಗಾಗ್ಗೆ ಪ್ರಕಟವಾಗುವ ಸರ್ಕಾರದ ಹಾಗೂ ಪ್ರಾಧಿಕಾರದ ಆದೇಶ ಮತ್ತು ಇತರ ವಿವರಗಳನ್ನು ಪ್ರಕಟ ಮಾಡಲಾಗುತ್ತದೆ.

7. ಕಾಯಿದೆಗೆ ಸಂಬಂಧಪಟ್ಟಂತೆ ಅಗತ್ಯವಾದ ರಾಷ್ಟ್ರೀಯ ಸಸ್ಯ ವಂಶಾಣು ನಿಧಿ (National Gene fund) ಯನ್ನು ಸ್ಥಾಪಿಸಲಾಗಿದೆ.

8. ದೇಶದಾದ್ಯಂತ ಕೃಷಿ ವಿಜ್ಞಾನಿಗಳಿಗೆ, ಕೃಷಿ ಸಂಬಂಧಿತ ಅಧಿಕಾರಿಗಳಿಗೆ ಹೆಚ್ಚಾಗಿ ರೈತರಿಗೆ ಕಾಯಿದೆಯನ್ನು ಪರಿಚಯಿಸಲು ಮತ್ತು ಪೂರ್ಣ ವಿವರಗಳನ್ನು ನೀಡಲು ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

9. ಪ್ರಾಧಿಕಾರವು ಕಿಸಾನ್ ದಿವಸ್/ರೈತರ ಮೇಳಗಳಲ್ಲಿ ಭಾಗವಹಿಸುವಿಕೆ ಮತ್ತು ಸಂಘಟಿಸುವಿಕೆ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಹಾಗೂ ಅನೇಕ ರೈತೋಪಯೋಗಿ ಕಾರ್ಯಕ್ರಮಗಳನ್ನು ಸಂಗಟಿಸಿದ್ದು ಎಲ್ಲ ಕಾರ್ಯಕ್ರಮಗಳನ್ನು ರೈತರ ಶ್ರೇಯೋಭಿವೃದ್ಧಿಗೆ ಸಹಕಾರಿಯಾಗುವಂತೆ ರೂಪಿಸಲಾಗಿದೆ.

10. ಸಸ್ಯ ತಳಿಗಳ ಮುಖ್ಯ ರಿಜಿಸ್ಟ್ರಿ ಕಛೇರಿಯು ನವದೇಹಲಿಯಲ್ಲಿ ಪ್ರಾಧಿಕಾರದ ಕಛೇರಿಯಲ್ಲಿ ಇದ್ದು, ಸಸ್ಯ ತಳಿ ನೋಂದಣಿಯ ಕಾರ್ಯವನ್ನು ತ್ವರಿತಗೊಳಿಸಲು ಪ್ರಾಂತೀಯ ಮಟ್ಟದಲ್ಲಿ ಉಪ ರಜಿಸ್ಟ್ರಿ ಕಛೇರಿಗಳನ್ನು ಅಸ್ಸಾಂ ರಾಜ್ಯದ ಗೌಹಾಟಿ ಮತ್ತು ಝೂರಕಂಡ್ ರಾಜ್ಯದ ರಾಂಚಿ ನಗರಗಳಲ್ಲಿ ಸ್ಥಾಪಿಸಲಾಗಿದೆ. ಮುಂದಿನ ದಿನಗಳಲ್ಲಿ ಪ್ರಾಂತೀಯ ಮಟ್ಟದಲ್ಲಿ ಇನ್ನು ಹೆಚ್ಚಿನ ಉಪ–ರಿಜಿಸ್ಟ್ರಿ ಕಛೇರಿಗಳನ್ನು ಇತರ ರಾಜ್ಯಗಳಲ್ಲೂ ಸಹ ಸ್ಥಾಪಿಸಲಾಗುವುದು.

11. ಕಾಯಿದೆಯ ಬಗ್ಗೆ ಹೊಸ ಹಾಗೂ ಹೆಚ್ಚಿನ ವಿವರಗಳು, ತಳಿ ನೋಂದಣಿ ಮಾಡಿಸಲು ಹಾಗೂ ಇತರ ಅರ್ಜಿ ನಮೂನೆಗಳು ಬೇಕಾದಲ್ಲಿ ಈ ಕೆಳಗೆ ತಿಳಿಸಿದ ವಿಳಾಸ ಅಥವಾ ವೆಬ್‌ಸೈಟ್‌ಗೆ ಸಂಪರ್ಕಿಸಿ.

The Registrar
Protection of Plant Varieties and Farmers' Rights Authority
NASC Complex, DPS Marg,
NEW DELHI-110012
Tel. No. 011-25840777
Fax No. 011-25840478
E-mail: plantauthority@gmail.com
Website: www.plantauthority.gov.in

## ರೈತರ ತಳಿ ನೋಂದಣಿಗೆ ಅರ್ಜಿ ನಮೂನೆ

| | | | |
|---|---|---|---|
| 1 | ಅರ್ಜಿದಾರ | : | ರೈತ/ರೈತ ಸಮುದಾಯ/ರೈತರ ಗುಂಪು |
| 2 | ಅಂಚೆ ವಿಳಾಸ | : | |
| 3 | ಸಂಪರ್ಕಿಸಬೇಕಾದ ರೈತನ ಹೆಸರು ಮತ್ತು ವಿಳಾಸ | : | |
| 4 | ತಳಿಯ ಬಗೆಗಿನ ಸಾಮಾನ್ಯ ಮಾಹಿತಿ | : | |
| 5 | ಬೆಳೆಯ ಸಾಮಾನ್ಯ ಹೆಸರು | : | |
| 6 | ವೈಜ್ಞಾನಿಕ ಹೆಸರು | : | |
| 7 | ಗುಂಪು | : | |
| 8 | ತಳಿಯ ವರ್ಗೀಕರಣ:ಸಾಮಾನ್ಯ ತಳಿ/ ಇತರೆ ತಳಿ | : | |
| 9 | ತಳಿ ಅಭಿವೃದ್ಧಿಪಡಿಸಿದ ರೈತನ ಹೆಸರು ಮತ್ತು ವಿಳಾಸ | : | |
| 10 | ತಳಿಯನ್ನು ವಾಣಿಜ್ಯೀಕರಿಸ ಲಾಗಿದೆಯೇ ಹೌದು/ಇಲ್ಲ ಹೌದಾದರೆ ತಳಿಯನ್ನು ಮೊದಲು ಮಾರಾಟ ಮಾಡಿದ ದಿನಾಂಕ | : | |

ನಾನು /ನಾವು ಈ ಮೂಲಕ ಘೋಷಿಸುವುದೇನಂದರೆ ತಳಿ ಅಭಿವೃದ್ಧಿಗೆ ಉಪಯೋಗಿಸಿದ ಅನುವಂಶಿಯ ಮಾಹಿತಿಯ ಸಂವಿಧಾನಿಕವಾಗಿ ಪಡೆದದ್ದಾಗಿದೆ.

ಅರ್ಜಿದಾರನ ಸಹಿ

**ಸಸ್ಯ ಸಂರಕ್ಷಣಾ ರೈತ ಪ್ರಶಸ್ತಿ ಅರ್ಜಿ ನಮೂನೆ**
**ಸಸ್ಯ ಸಂರಕ್ಷಣೆ, ಅಭಿವೃದ್ಧಿ ಮತ್ತು ವನ್ಯ ಜಾತಿಯ ಸಸ್ಯಗಳು ಮತ್ತು ಸ್ಥಳೀಯ ತಳಿಗಳ ಸಂರಕ್ಷಣೆಯಲ್ಲಿ ನಿರತನಾಗಿರುವ ರೈತನಿಗೆ ನೀಡುವ ಪ್ರಶಸ್ತಿ**
**(ವಿಭಗ 39(3) PPV & FRA 2001)**

| | | |
|---|---|---|
| 1 | ಅರ್ಜಿದಾರ | |
| 2 | ಅಂಚೆ ವಿಳಾಸ | |
| 3 | ಸಂರಕ್ಷಣೆಯ ಸ್ಥಳ : | |
| 4 | ಸಂರಕ್ಷಿಸಿದ ಬೆಳೆ/ಸಸ್ಯ | |
| 5. | ಸಂರಕ್ಷಿಸಿದ ಸಸ್ಯ ತಳಿಗಳು | |
| 6. | ಸಸ್ಯ ತಳಿಗಳನ್ನು ಸಂರಕ್ಷಿಸಿದ ಸ್ಥಳದ ವಿಸ್ತೀರ್ಣ | |
| 7. | ಯಾವುದಾದರೂ ಅನ್ವೇಷಣಾ ಕ್ರಮವನ್ನು ಸಂರಕ್ಷಣೆಯಲ್ಲಿ ಉಪಯೋಗಿಸಲಾಗಿದೆಯೇ? ವಿವರ | |
| 8. | ಸಂರಕ್ಷಿಸಿದ ಸಸ್ಯ ತಳಿಗಳಲ್ಲಿ ಗುರುತಿಸಿದ ವಿಶಿಷ್ಠ ಗುಣ ಯಾವುದು? | |
| 9. | ಯಾವುದಾದರೂ ಸಂಸ್ಥೆ ಈ ವಿಶಿಷ್ಠ ಗುಣ ಗುರುತಿಸಿದಿಯಾ? ಇದ್ದರೆ ವಿವರ | |
| 10. | ಈ ತಳಿ ಜೀವ ವೈವಿಧ್ಯತೆಯ ಕಡತದಲ್ಲಿ ದಾಖಲಾಗಿದೆಯೇ? | |
| 11. | ರೈತ ಸಮುದಾಯ ಯಾವುದಾದರೂ ಇತರ ಸಮುದಾಯಗಳಿಂದ ಪ್ರಶಸ್ತಿ/ಪ್ರಶಂಸೆಗೆ ಭಾಜನವಾಗಿದೆಯೇ? | |
| 12. | ಸಮುದಾಯ ಸರ್ಕಾರೇತರ ಸಂಸ್ಥೆಯ ? ಅಥವಾ ಸರ್ಕಾರಿ ಸಂಸ್ಥೆಯೇ? | |

**ಘೋಷಣೆ**

ಹೆಸರು :

ಅಂಚೆ ವಿಳಾಸ :

ದೂರವಾಣಿ ಸಂಖ್ಯೆ :

ಮಿಂಚಂಚೆ (E-mail ID)

ಈ ಮೇಲೆ ತಿಳಿಸಿದ, ಸಸ್ಯ ಸಂರಕ್ಷಣಾ ಮಾಹಿತಿಯು ನನಗೆ ತಿಳಿದ ಮಟ್ಟಿಗೆ ಸರಿಯಾಗಿದೆ.

ಸಹಿ

## ಸಸ್ಯ ಸಂಪನ್ಮೂಲಗಳ ಸಂರಕ್ಷ ಸಮುದಾಯ ಪ್ರಶಸ್ತಿ

**ಗುರುತಿಸಿರುವ ಜೈವಿಕ ವೈವಿಧ್ಯತೆಯ ಮೂಲತಾಣಗಳಲ್ಲಿ ಸಸ್ಯ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಸಸ್ಯ ಸಂಪನ್ಮೂಲಗಳ ವನ್ಯ ಸಂಬಂಧಿ ಸಸ್ಯಗಳ ಸಂರಕ್ಷಣೆ ಮತ್ತು ಅಭಿವೃದ್ಧಿಯಲ್ಲಿ ಸಹಕರಿಸುತ್ತಿರುವ ರೈತ ಸಮುದಾಯಗಳಿಗೆ ನೀಡುವ ಪ್ರಶಸ್ತಿ**

**(ವಿಭಾಗ : 45 PPV & FRA 2001, 70(2) (a) PPV & FR ನಿಯಮ, 2003)**

ವರ್ಷ:__________

| | | |
|---|---|---|
| 1 | ಅರ್ಜಿದಾರ | |
| 2 | ಅಂಚೆ ವಿಳಾಸ | |
| 3 | ಕೃಷಿ ಸಮುದಾಯದ ಮಾಹಿತಿ | |
| 4 | ಯಾವ ಜೈವಿಕ ವೈವಿಧ್ಯತೆಯ ಮೂಲ ತಾಣಕ್ಕೆ ಕೃಷಿ ಸಮುದಾಯ ಸೇರಿದೆ? | |
| 5 | ಸಂರಕ್ಷಣೆಯ ಸ್ಥಳ | |
| 6 | ಸಂರಕ್ಷಿಸಿದ ಬೆಳೆ/ಸಸ್ಯ | |
| 7 | ಸಂರಕ್ಷಿಸಿದ ಸಸ್ಯ ತಳಿಗಳು | |
| 8 | ಸಸ್ಯ ತಳಿಗಳನ್ನು ಸಂರಕ್ಷಿಸಿದ ಸ್ಥಳದ ವಿಸ್ತೀರ್ಣ | |
| 9 | ಯಾವುದಾದರೂ ಅನ್ವೇಷಣಾ ಕ್ರಮವನ್ನು ಸಂರಕ್ಷಣೆಯಲ್ಲಿ ಉಪಯೋಗಿಸಲಾಗಿದೆಯೇ? ವಿವರ | |
| 10 | ಇತರರೊಂದಿಗೆ ವಿನಿಮಯ/ಹಂಚಿಕೊಂಡ ತಳಿಗಳ ಬಗ್ಗೆ ಮಾಹಿತಿ | |
| 11 | ಸಂರಕ್ಷಿಸಿ ಸಸ್ಯ ತಳಿಗಳಲ್ಲಿ ಗುರುತಿಸಿದ ವಿಶಿಷ್ಟ ಗುಣ ಯಾವುದು? | |
| 12 | ಯಾವುದಾದರೂ ಸಂಸ್ಥೆ ಈ ವಿಶಿಷ್ಠ ಗುಣ ಗುರುತಿಸಿದಿಯಾ? ಇದ್ದರೆ ವಿವರ | |
| 13 | ಈ ತಳಿ ಜೀವ ವೈವಿಧ್ಯತೆಯ ಕಡತದಲ್ಲಿ ದಾಖಲಾಗಿದೆಯೇ? | |
| 14 | ರೈತ ಸಮುದಾಯ ಯಾವುದಾದರೂ ಇತರ ಸಮುದಾಯಗಳಿಂದ ಪ್ರಶಸ್ತಿ/ಪ್ರಶಂಸೆಗೆ ಭಾಜನವಾಗಿದೆಯೇ? | |
| 15 | ಸಮುದಾಯ ಸರ್ಕಾರೇತರ ಸಂಸ್ಥೆಯೇ? ಅಥವಾ ಸರ್ಕಾರಿ ಸಂಸ್ಥೆಯೇ? | |
| 16 | ಪ್ರಶಸ್ತಿ ಮೊತ್ತದಲ್ಲಿ ಮಾಡಬೇಕೆಂದಿರುವ ಕಾರ್ಯಕ್ರಮಗಳ ಬಗ್ಗೆ ಕಿರುಮಾಹಿತಿ ಒದಗಿಸಿ | |

# ಘೋಷಣೆ

ಘೋಷಣೆ

ಹೆಸರು :

ಜೀವ ವೈವಿಧ್ಯತೆಯ ಮೂಲ ತಾಣದ ಸಂಖ್ಯೆ :

ಅಂಚೆ ವಿಳಾಸ :

ಈ ಮೇಲೆ ತಿಳಿಸಿದ, ಸಸ್ಯ ಸಂರಕ್ಷಣಾ ಮಾಹಿತಿಯು ನನಗೆ ತಿಳಿದ ಮಟ್ಟಿಗೆ ಸರಿಯಾಗಿದೆ.

ಸಹಿ



## ಹೆಚ್ಚಿನ ಮಾಹಿತಿ ಮತ್ತು ವಿವರಗಳಿಗಾಗಿ ಸಂಪರ್ಕಿಸಿ


**ಕುಲಸಚಿವರು**

**ಸಸ್ಯ ತಳಿಗಳ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರ**

**ಎಸ್–2, ಎ–ಬ್ಲಾಕ್, ಎನ್.ಎ.ಎಸ್.ಸಿ. ಸಮುಚ್ಚಯ**

**ದೇವ ಪ್ರಕಾಶ್ ಶಾಸ್ತ್ರಿ ರಸ್ತೆ, ನವದೆಹಲಿ – 110 012.**

**ದೂರವಾಣಿ ಸಂಖ್ಯೆ : 011–25843315, 25840777, 25843808,**

**ಫ್ಯಾಕ್ಸ್ : 011–25840478**

**The Registrar**

**Protection of Plant Varieties and Farmers Rights Authority**

S-2, A- Block, NASC Complex, Dev Prakash Shastri Road

New Delhi-110 012

Tel : 011-25843315, 25840777, 25843808, Fax : 011-25840478

Website: www.plantauthority.gov.in, Email:ppvfra-agri@nic.in






# ಕೃಷಿ ವಿಜ್ಞಾನ ಕೇಂದ್ರ


ಹನುಮನಮಟ್ಟಿ – 581 115, ತಾ: ರಾಣೇಬೆನ್ನೂರು, ಜಿ. ಹಾವೇರಿ

ದೂರವಾಣಿ : (08373)253524, ಮೊಬೈಲ : 94484 95338

ಮಿಚಂಚೆ: kvk_haveri@rediffmail.com

ಅಂತರಜಾಲ : www.kvkhaveri.org